# ಆರ್ಬಿಟ್,ಹುಮನಾಬಾದ | ಸೇವಾ ಸಂಗಮ ಸಂಸ್ಥೆ, ಕಲಬುರಗಿ

ಸಮಾಜ ಸೇವಾ ಸಂಸ್ಥೆ, NH 65 ರೈಲ್ವೇ ನಿಲ್ದಾಣದ ಹತ್ತಿರ
ಹುಮ್ನಾಬಾದ ತಾಲೂಕು, ಬೀದರ್ ಜಿಲ್ಲೆ, ಕರ್ನಾಟಕ, 585330

ಸಮಾಜ ಸೇವಾ ಸಂಸ್ಥೆ ಮತ್ತು ಮಾನವ ಸಂಪನ್ಮೂಲ ಅಭಿವೃದ್ಧಿ ಕೇಂದ್ರ ಕೇಂದ್ರೀಯ ವಿದ್ಯಾಲಯ
ಹತ್ತಿರ, ಕೋಟ್ನೂರ (ಡಿ) ಜೇವರ್ಗಿ ರಸ್ತೆ ಕಲಬುರಗಿ 585102

# ಸೇವಾವಾಣಿ

ಜೂನ್/June 2025






ಪೂಜ್ಯ. ಡಾ॥ ರಾಬರ್ಟ್ ಮೈಕಲ್ ಮಿರಂದಾ
ಧರ್ಮಾಧ್ಯಕ್ಷರು, ಗುಲ್ಬರ್ಗಾ ಧರ್ಮಕ್ಷೇತ್ರ

ವಂ. ಫಾ॥ ವಿಕ್ಟರ್ ವಾಸ್ ನಿರ್ದೇಶಕರು,
ಆರ್ಬಿಟ್ ಮತ್ತು ಸೇವಾ ಸಂಗಮ ಸಂಸ್ಥೆ, ಗುಲ್ಬರ್ಗಾ

## "ತಾಲೂಕ ಒಕ್ಕೂಟ ಬಲವರ್ಧನೆ ತರಬೇತಿ ಕಾರ್ಯಗಾರ"

22 ಮೇ 2025ರಂದು ಆರ್ಬಿಟ್ ಸಂಸ್ಥೆ ಹುಮ್ನಾಬಾದ್‌ನಲ್ಲಿ ತಾಲೂಕ ಒಕ್ಕೂಟ ಬಲವರ್ಧನೆ ತರಬೇತಿ ಕಾರ್ಯಗಾರವನ್ನು ಹಮ್ಮಿಕೊಳ್ಳಲಾಗಿತ್ತು. ಶ್ರೀಮತಿ ಗೀತಾ ರೆಡ್ಡಿ ವಕೀಲರು ಸಂಪನ್ಮೂಲ ವ್ಯಕ್ತಿಯಾಗಿ ಆಗಮಿಸಿದ್ದು ಒಕ್ಕೂಟದ ಸಭೆಗಳು ಬಲವರ್ಧನೆಗೊಳ್ಳಬೇಕಾದರೆ ನಾಯಕತ್ವ ಅತಿ ಮುಖ್ಯವಾಗಿದೆ ಹಾಗಾಗಿ ಪ್ರತಿಯೊಬ್ಬರೂ ನಾಯಕತ್ವದ ಗುಣಗಳನ್ನು ಬೆಳೆಸಿಕೊಂಡು ಕಾರ್ಯನಿರ್ವಹಿಸಿಕೊಂಡು ಹೋಗಬೇಕೆಂದು ತಿಳಿಸಿದರು. ಶ್ರೀಮತಿ ನಿರ್ಮಲ ಮಹಿಳಾ ಸಬಲೀಕರಣ ಯೋಜನೆಯ ಸಂಯೋಜಕ ಒಕ್ಕೂಟದ ನೀತಿ ನಿಯಮಗಳ ಕುರಿತು ಸವಿಸ್ತಾರವಾಗಿ ಮಾಹಿತಿ ನೀಡಿದರು. ಫಾದರ್ ವಿಕ್ಟರ್ ವಾಸ್ ನಿರ್ದೇಶಕರು ಆರ್ಬಿಟ್ ಸಂಸ್ಥೆ ಹುಮ್ನಾಬಾದ್ ಇವರು ಮಾತನಾಡುತ್ತಾ ಒಕ್ಕೂಟಗಳು ಬಲವರ್ಧನೆಗೊಳ್ಳಬೇಕಾದರೆ ಸಂಘಗಳ ಜವಾಬ್ದಾರಿ ಮಹಾಸಂಗ ಮಹಾಸಂಗಗಳ ಬಲವರ್ಧನೆ ಒಕ್ಕೂಟಗಳು ಮಾಡಬೇಕೆಂದು ಮಹಿಳೆಯರನ್ನು ಹುರಿದುಂಬಿಸಿದರು. ಕಿರಣ ಮಹಾಸಂಗದವರು ಪ್ರಾರ್ಥಿಸಿದರು. ವಿಮಲಾಬಾಯ್ ಅವರು ಸ್ವಾಗತಿಸಿದರು. ತರಬೇತಿಯಲ್ಲಿ 41 ಪದಾಧಿಕಾರಿಗಳು ಕಾರ್ಯಕರ್ತರು ಸಂಸ್ಥೆಯ ಸಿಬ್ಬಂದಿ ವರ್ಗದವರು ಭಾಗವಹಿಸಿ ಮಾಹಿತಿ ಪಡೆದುಕೊಂಡರು ತಾವರೆ ಮಹಾಸಂಗದವರು ವಂದಿಸಿದರು.









@Orbitbidar | @orbithumnabad
@Sevasangama Kalaburagi @sevasangama01 www.sevasangama.in 897 111 9914

# “ನವಜೀವನ (ಎ.ಪಿ.ಎಫ್) ಕಾರ್ಯಕ್ರಮ”

## “ತಾಲೂಕ ಮಟ್ಟದ ಮಾನಸಿಕ ಅಸ್ವಸ್ಥರ ಮತ್ತು ಪೋಷಕರ ಸಂಘದ ಸಭೆ”



14 ಮೇ 2025ರಂದು ಹುಮನಾಬಾದ ನಗರದ ಹೊರವಲಯದ ಅರ್ಬಿಟ್ ಸಂಸ್ಥೆಯ ಸಭಾಂಗಣದಲ್ಲಿ ಅಜೀಂ ಪ್ರೇಮ್ ಜಿ ಫೌಂಡೇಶನ್ ಇವರ ಸಂಯುಕ್ತಶ್ರಯದಲ್ಲಿ ತಾಲೂಕ ಮಟ್ಟದ ಮಾನಸಿಕ ಅಸ್ವಸ್ಥರ ಮತ್ತು ಪೋಷಕರ ಸಂಘದ ಸಭೆಯನ್ನು ಮಾಡಲಾಯಿತು. ಆರ್ಬಿಟ್ ಸಂಸ್ಥೆಯ ನವಜೀವನ ಕಾರ್ಯಕ್ರಮದ ಆಪ್ತ ಸಮಾಲೋಚಕರಾದ ಶ್ರೀ ಅರುಣಕೋಟೆ ಅವರು ಸಮುದಾಯದಲ್ಲಿ ವಿಷೇಶ ವಿಕಲ ಚೇತನರು ಅನುಭವಿಸುವ ಅನ್ಸಮಸ್ಸೆಗಳ ಕುರಿತು ಹಾಗು ಅವುಗಳನ್ನು ಹೇಗೆ ಬಗೆಹರಿಸಿಕೊಳ್ಳಬಹುದು. ಸರ್ಕಾರದಿಂದ ಸಿಗುವ ಸವಲತ್ತು ಗಳಕುರಿತು ತಿಳಿಸುತ್ತಾ. ತಾಲೂಕು ಸಭೆ ಮಾಡುವ ಉದ್ದೇಶಗಳ ಬಗ್ಗೆ ತಿಳಿಸಿದರು. ಎಲ್ಲರು ಬಗ್ಗಟ್ಟಿನಿಂದ ಸಭೆಗೆ ಸೇರುವುದು. ಸಮಸ್ಸೆಗಳ ಬಗ್ಗೆ ಚರ್ಚಿಸುವುದು. ಇಲಾಖೆಗಳ ಭೇಟಿ ಮಾಡುವುದು. ಅಧಿಕಾರಿಗಳ ಜೊತೆ ಜಾಲ ಬಂಧ. ಹಾಗೆ ಸರ್ಕಾರದ ಸೌಲಭ್ಯಗಳಾದ. ಸಾಧನ ಸಲಕರಣೆ. ಜಾಬ್ ಕಾರ್ಡ್. ಗಜುಜ ಕಾರ್ಡ್. 5% ಸರಕಾರದ ಅನುದಾನ. ಆರೋಗ್ಯ ಕಾರ್ಡ್, ರೇಶನ್ ಕಾರ್ಡ್, ಲೆಬರ್ ಕಾರ್ಡ್ ಇತ್ಯಾದಿ ಸವಲತ್ತುಗಳ ಬಗ್ಗೆ ಪ್ರತಿವಬ್ಬರಿಗೆ ಮಾಹಿತಿಯನ್ನು ತಿಳಿಸಿದರು. ಈ ಸಂಘದ ಸಭೆಯಲ್ಲಿ ಮಾನಸಿಕ ಅಸ್ವಸ್ಥರು ಮತ್ತು ಪೋಷಕರ ಸಭೆಯ ಸದುಪಯೋಗವನ್ನು ಪಡೆದು ಕೊಂಡರು.

## “ಸಿಬ್ಬಂದಿ ಸಾಮರ್ಥ್ಯ ಬಲವರ್ಧನೆ ಕುರಿತು ಕ್ಷೇತ್ರ ಆಧಾರಿತ ತರಬೇತಿ”



10 ಮೇ 2025ರಂದು ಹುಮ್ನಾಬಾದ್ ತಾಲೂಕಿನ ಸಿಂದಬಂದಗಿ ಹಾಗೂ ಹಳ್ಳಿಕೇಡ (ಬಿ) ಗ್ರಾಮಗಳಲ್ಲಿ ಆರ್ಬಿಟ್ ಸಂಸ್ಥೆ ಹಾಗೂ ಅಜೀಮ್ ಪ್ರೇಮ್ ಜಿ ಫೌಂಡೇಶನ್ ಇವರ ಸಂಯುಕ್ತ ಆಶ್ರಯದಲ್ಲಿ ನವಜೀವನ ಕಾರ್ಯಕ್ರಮದ ಸಿಬ್ಬಂದಿ ವರ್ಗದವರಿಗೆ ಸಿಬ್ಬಂದಿ ಸಾಮರ್ಥ್ಯ ಬಲ ವರ್ಧನೆ ಕುರಿತು ಕ್ಷೇತ್ರ ಆಧಾರಿತ ತರಬೇತಿಗಾರವನು ಹಮ್ಮಿಕೊಳ್ಳಲಾಯಿತು. ಈ ಒಂದು ತರಬೇತಿಗೆ ಸಂಪನ್ಮೂಲ ವ್ಯಕ್ತಿಗಳಾಗಿ ಆಗಮಿಸಿದ APD ಸಂಸ್ಥೆಯ ವಿಭಾಗಿ ವ್ಯವಸ್ಥಾಪಕರಾದ ಶ್ರೀ ಸಂತೋಷ್ ರವರು ತರಬೇತಿಯನ್ನು ನೀಡುತ್ತಾ, ಮಾನಸಿಕ ಅಸ್ವಸ್ಥರ ಮನೆ ಭೇಟಿ ಮಾಡುವ ಸಂದರ್ಭದಲ್ಲಿ ಅವರ ಪ್ರತಿಯೊಂದು ಮಾಹಿತಿಯನ್ನು ಕ್ರೂಡೀಕರಣ ಮಾಡುವುದು. ಒಂದು ವೇಳೆ ಸಮಸ್ಯೆಗಳನ್ನು ಗುರುತಿಸಿದಾಗ ಆ ಸಮಸ್ಯೆಗಳ ಮೇಲೆ ಕಾರ್ಯಕರ್ತರು ಕಾರ್ಯನಿರ್ವಹಿಸಿದಾಗ ಫಲಾನುಭವಿಗಳ ಮನಸ್ಸನ್ನು ಗೆಲ್ಲಬಹುದು ಹಾಗೂ ಕಾರ್ಯಕ್ರಮವನ್ನು ಉತ್ತಮ ರೀತಿಯಲ್ಲಿ ಯಶಸ್ವಿಗೊಳಿಸಬಹುದು ಎಂದು ತಿಳಿಸಿದರು. ತರಬೇತಿಯಲ್ಲಿ ಸಿಬ್ಬಂದಿ ವರ್ಗದವರು ಹಾಗೂ ಸಂಪನ್ಮೂಲ ವ್ಯಕ್ತಿಗಳು ಸೇರಿ 11 ಜನರು ಭಾಗವಹಿಸಿದರು.

## “ಮಾನಸಿಕ ಅಸ್ವಸ್ಥರ ಜಾಗೃತಿ ಕಾರ್ಯಕ್ರಮ”



05 ಮೇ 2025ರಂದು ಹುಮ್ನಾಬಾದ್ ತಾಲೂಕಿನ ಜಲಸಂಗಿ ಗ್ರಾಮದಲ್ಲಿ ಉದ್ಯೋಗ ಖಾತ್ರೆ ಕೆಲಸ ಮಾಡುವವರಿಗೆ ಮಾನಸಿಕ ಅಸ್ವಸ್ಥರ ಬಗ್ಗೆ ಅವರ್ನೆಸ್ ಇದು ಅಜೀಂ ಪ್ರೇಮ್ ಜಿ ಫೌಂಡೇಶನ್ ಇವರ ಸಂಯುಕ್ತ ಆಶ್ರಯದ ಆರ್ಬಿಟ್ ಸಂಸ್ಥೆಯ ನೇತೃತ್ವದಲ್ಲಿ ಮಾನಸಿಕ ಅಸ್ವಸ್ಥರ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು. ಈ ಕಾರ್ಯಕ್ರಮಕ್ಕೆ ಸಂಪನ್ಮೂಲ ವ್ಯಕ್ತಿಯಾಗಿ ಆರ್ಬಿಟ್ ಸಂಸ್ಥೆಯ ಸಹ ನಿರ್ದೇಶಕರಾದ ಫಾದರ್ ವಿಜಯ್ ಕುಮಾರ್ ಇವರು ಒಟ್ಟು 115 ಜನರಿಗೆ ಮಾನಸಿಕ ಅಸ್ವಸ್ಥರ ಬಗ್ಗೆ ಅವೇರ್ನೆಸ್ ಮೂಡಿಸಿದರು. ಮತ್ತು ಅವರಿಗೆ ಸರ್ಕಾರದಿಂದ ಸಿಗುವ ಸೌಲಭ್ಯ ಬಗ್ಗೆ ತಿಳಿಸಿದರು. ಮಾನಸಿಕ ಕಾಯಿಲೆ ಒಂದು ಮೆದುಳಿನ ಕಾಯಿಲೆ. ಈ ರೋಗಕ್ಕೆ ಔಷಧಿ ಇದೆ ಪ್ರತಿ ಬುಧವಾರ ಸರ್ಕಾರಿ ಆಸ್ಪತ್ರೆಯಲ್ಲಿ ಡಾ.  ಬರುತ್ತಾರೆ. ಮಾನಸಿಕ ಕಾಯಿಲೆ ತಪಾಸಣೆ ಮಾಡಿ ಒಂದು ತಿಂಗಳ ಔಷಧಿಯನ್ನು ಕೊಡುತ್ತಾರೆ. ಹಾಗಾಗಿ ನಿಮ್ಮ ಹಳ್ಳಿಯಲ್ಲಿ ಯಾರಾದರೂ ಇದ್ದರೆ ಅವರಿಗೆ ನೀವು ಸಹಾಯ ಮಾಡಿರಿ ಎಂದು ತಿಳಿಸಲಾಯಿತು. ಹುಮ್ನಾಬಾದ್ ತಾಲೂಕಿನ ಸರ್ಕಾರಿ ಆಸ್ಪತ್ರೆಯಲ್ಲಿ ಪ್ರತಿ ಬುಧವಾರ ಡಾಕ್ಟರ್ ಬರುತ್ತಾರೆ ಅವರನ್ನು ತಪಾಸಣೆ ಮಾಡಿ ಅವರಿಗೆ ಉಚಿತ ಔಷಧಿಯನ್ನು ಕೊಡುತ್ತಾರೆ ಬೆಳಗ್ಗೆ: 10 ಗಂಟೆಯಿಂದ ಮಧ್ಯಾ 1;00 ಗಂಟೆಯವರೆಗೆ ಇರುತ್ತಾರೆ ಎಂದು ತಿಳಿಸಲಾಯಿತು.

## “ಸಿಮಿ ನಾಗಣ್ಣ ವಿಶೇಷ ವಿಕಲ ಚೇತನರ ಸಂಘದ ಸಭೆ”



20 ಮೇ 2025ರಂದು ಹುಮ್ನಾಬಾದ್ ತಾಲೂಕಿನ ಹಳ್ಳಿಖೆಡ್ (ಬಿ) ನಗರಕ್ಕೆ ಭೇಟಿ ನೀಡಿ. ಅಲ್ಲಿಯ ಶ್ರೀ ಸಿಮಿ ನಾಗಣ್ಣ ವಿಶೇಷ ವಿಕಲ ಚೇತನರ ಸಂಘದ ಸಭೆ ನಡೆಸಲಾಯಿತು. ಈ ಕಾರ್ಯಕ್ರಮದಲ್ಲಿ ಆರ್ಬಿಟ್ ಸಂಸ್ಥೆಯ ನವಜೀವನ ಕಾರ್ಯಕ್ರಮದ ಆಪ್ತ ಸಮಾಲೋಚಕರಾದ ಶ್ರೀ ರವಿ ಅವರು ಸಂಘದ ಸದಸ್ಯರಿಗೆ ಮಾತ್ರೆಗಳ ಕುರಿತು ವಿವರಿಸಿದರು. ಮಾತ್ರೆಗಳು ಸತತವಾಗಿ ಸೇವಿಸುವುದರ ಮೂಲಕ ರೋಗವನ್ನು ಗುಣಪಡಿಸಬಹುದು. ಹಾಗೂ ಮಾತ್ರೆಗಳ ಸೇವನೆಯಿಂದ ಆರೋಗ್ಯದಲ್ಲಿ ಸಮಸ್ಯೆ ಕಂಡುಬಂದಲ್ಲಿ ವೈದ್ಯರನ್ನು ಸಂಪರ್ಕಿಸಬೇಕು ಎಂಬುವುದರ ಬಗ್ಗೆ ಸಂಘದ ಸದಸ್ಯರಿಗೆ ಮಾಹಿತಿಯನ್ನು ನೀಡಿದರು. ನವಜೀವನ ಕಾರ್ಯಕ್ರಮದ ಕಾರ್ಯಕರ್ತರಾದ ಡೇವಿಡ್ ಅವರು ಪ್ರತಿ ತಿಂಗಳು ನಡೆಯುವ ಡಿ.ಎಮ್.ಎಚ್.ಪಿ ಕ್ಯಾಂಪ್ಗೆ ಬರುವಂತೆ ತಿಳಿಸಿದರು. ಮಾಹಿತಿಯನ್ನು ಪಡೆದ ಸಂಘದ ಸದಸ್ಯರೆಲ್ಲರೂ ಆರ್ಬಿಟ್ ಸಂಸ್ಥೆಯ ನಿರ್ದೇಶಕರಿಗೂ, ಸಂಯೋಜಕರಿಗೂ ಮತ್ತು ಕಾರ್ಯಕರ್ತರಿಗೂ ಧನ್ಯವಾದಗಳು ತಿಳಿಸಿದರು.

## “ಮಾನಸಿಕ ಆರೋಗ್ಯದ ಕುರಿತು ಜಾಗೃತಿ




14 ಮೇ 2025ರಂದು ಚಿಡುಗುಪ್ಪ ತಾಲೂಕಿನ ಮನ್ನಾಎಖೆಳಿ ಗ್ರಾಮದ ಸಮುದಾಯದ ಮಹಿಳೆಯರಿಗೆ ಆರ್ಬಿಟ ಸಂಸ್ಥೆ ಹುಮ್ನಾಬಾದ್ ಮತ್ತು ಅಜೀಮ್ ಪ್ರೇಮ್ ಜಿ ಫೌಂಡೇಶನ್ ಇವರ ಸಂಯುಕ್ತ ಆಶ್ರಯದಲ್ಲಿ ಮಾನಸಿಕ ಆರೋಗ್ಯದ ಕುರಿತು ಜಾಗೃತಿ ಕಾರ್ಯಕ್ರಮ ನಡೆಸಲಾಯಿತು. ಈ ಕಾರ್ಯಕ್ರಮದಲಿ ಆರ್ಬಿಟ್ ಸಂಸ್ಥೆಯ ನವಜೀವನ ಕಾರ್ಯಕ್ರಮದ ಕಾರ್ಯಕರ್ತರಾದ ಶ್ರೀ ಅರುಣ್ ಕುಮಾರ್ ಅವರು ಮಹಿಳೆಯರಿಗೆ ಮಾಹಿತಿ ನೀಡುತ್ತಾ ಮಾನಸಿಕ ಕಾಯಿಲೆ ಒಂದು ಮೆದುಳಿನ ಕಾಯಿಲೆಯಾಗಿದೆ. ಈ ಕಾಯಿಲೆಯು ಮೆದುಳಿನಲ್ಲಿ ರಾಸಾಯನಿಕ ಕ್ರಿಯೆಗಳು ಏರುಪೇರಾಗಿ ಬರುವಂತ ಕಾಯಿಲೆಯಾಗಿದೆ. ಈ ಕಾಯಿಲೆಯೂ ಇತರ ಕಾಯಿಲೆಗಳಂತೆ ಒಂದು ಸಾಮಾನ್ಯ ಕಾಯಿಲೆಯಾಗಿದೆ. ಈ ಕಾಯಿಲೆ ಬಂದಾಗ ನಾವು ಭಯಪಡುವ ಅವಶ್ಯಕತೆ ಇಲ್ಲ. ಯಾಕೆಂದರೆ ಸರ್ಕಾರಿ ಆಸ್ಪತ್ರೆಯಲ್ಲಿ ಉಚಿತ ಚಿಕಿತ್ಸೆ ಇದೆ. ನಿಮ್ಮಲ್ಲಿ ಯಾರಾದರೂ ಮಾನಸಿಕ ಕಾಯಿಲೆಗೆ ಬಲಿಯಾದರೆ ಇದರ ಸದುಪಯೋಗ ಪಡೆದುಕೊಳ್ಳಬೇಕೆಂದು ತಿಳಿಸಿದರು. ಈ ಕಾರ್ಯಕ್ರಮದಲ್ಲಿ ಒಟ್ಟು 20 ಮಹಿಳೆಯರು ಭಾಗವಹಿಸಿದ್ದರು.

## “ಬಾಬು ಜಗಜೀವನ್ ರಾಮ್ ವಿಶೇಷ ವಿಕಲಚೇತನರ ಸಂಘದ ಸಭೆ”



06 ಮೇ 2025ರಂದು ಹುಮ್ನಾಬಾದ್ ತಾಲೂಕಿನ ದೊಮ್ಮನ್ಸೂರ್ ಗ್ರಾಮದಲ್ಲಿ ಬಾಬು ಜಗಜೀವನ್ ರಾಮ್ ವಿಶೇಷ ವಿಕಲಚೇತನರ ಸಂಘದ ಸಭೆ ಮಾಡಲಾಯಿತು. ಅಜೀಮ್ ಪ್ರೇಮ್ ಜಿ ಫೌಂಡೇಶನ್ ಹಾಗೂ ಆರ್ಬಿಟ್ ಸಂಸ್ಥೆಯ ಸಂಯುಕ್ತ ಆಶ್ರಯದಲ್ಲಿ ನಡೆಯುವ, ಈ ವಿಶೇಷ ವಿಕಲಚೇತನರ ಸಂಘದ ಸದಸ್ಯರಿಗೆ ಗ್ರಾಮ ಪಂಚಾಯಿತಿಯಿಂದ ಸಿಗುವ ಸೌಲಭ್ಯದ ಕುರಿತು ಮತ್ತು ವಿಶೇಷವಾಗಿ ನರೇಗಾ ಕೂಲಿ ಕಾರ್ಮಿಕರಿಗೆ ಸಿಗುವ ಸೌಲಭ್ಯದ ಕುರಿತು ಸಭೆಯ ಸದಸ್ಯರಿಗೆ ಮಾಹಿತಿ ನೀಡಲಾಯಿತು.

## “ಶೀಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಕಾರ್ಯಕ್ರಮ”

### “ಸೆಂಟ್ ಮೇರಿ ಶಾಲೆಯ ಶೀಘ್ರ ಪತ್ತೆ ಹಚ್ಚುವಿಕೆ ಮಕ್ಕಳಿಗೆ ಮಾಪನ ಶಿಬಿರ”



ಮೇ 20 2025ರಂದು ಗುಲ್ಬರ್ಗ ನಗರದ ಸೆಂಟ್ ಮೇರಿ ಶಾಲೆಯ ಶೀಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣದ ಚೇತನ ಕೇಂದ್ರದಲ್ಲಿ ಆರ್ಬಿಟ್ ಸಂಸ್ಥೆಯ ಕಾರ್ಯಕರ್ತೆ ಶ್ರೀಮತಿ ಕವಿತಾ ರವರು ಆರ್ಬಿಟ್ ಸಂಸ್ಥೆ ಇಂದ ಬೆಳವಣಿಗೆಯಿಂದ ಕುಂಠಿತ ಹೊಂದಿರುವ 2 ಮಕ್ಕಳಿಗೆ ಮಾಪನ ಶಿಬಿರ ಮಾಡಿಸಲು ಕರೆದೊಯಲಾಯಿತು. ಮಕ್ಕಳಿಗೆ ಅಳತೆಯ ಮುಖಾಂತರ ಸಾಧನ ಸಲಕರಣೆಗಳನ್ನು ಕೊಟ್ಟು ಮಕ್ಕಳಿಗೆ ಚಟುವಟಿಕೆಗಳ ಮುಖಾಂತರ ಬದಲಾವಣೆ ಹೊಂದಲು ಹಾಗು ಮಕ್ಕಳ ಭವಿಷ್ಯವನ್ನು ರೂಪಿಸಿಕೊಳ್ಳಲು ಸಹಾಯವಾಗುತ್ತದೆ. ಆದ್ದರಿಂದ ಕುಂಠಿತ ಮಕ್ಕಳಿಗೆ ಆರ್ಬಿಟ್ ಸಂಸ್ಥೆ ದಾರಿ ದೀಪವಾಗಿದೆ.

## “ಬೆಳವಣಿಗೆಯಿಂದ ಕುಂಠಿತ ಹೊಂದಿರುವಂತಹ ಮಕ್ಕಳ ಪೋಷಕರ ಬಲವರ್ಧನೆ ಸಭೆ”



ಮೇ 21 2025ರಂದು ಹುಮನಾಬಾದ್ ತಾಲೂಕಿನ ಧೂಮ್ಮನ್ಸೂರ್ ಗ್ರಾಮದಲ್ಲಿ ಬೆಳವಣಿಗೆಯಿಂದ ಕುಂಠಿತ ಹೊಂದಿರುವಂತಹ ಮಕ್ಕಳ ಪೋಷಕರ ಬಲವರ್ಧನೆ ಸಭೆ ಆಚರಿಸಲಾಯಿತು. ಸಭೆಯಲ್ಲಿ 10 ಜನ ಪೋಷಕರು ಭಾಗವಹಿಸಿ ಮಕ್ಕಳಿಗೆ ಯಾವ ರೀತಿ ಚಟುವಟಿಕೆ ಮಾಡಿದರೆ ಬದಲಾವಣೆ ಹೊಂದುತ್ತಾರೆ ಎಂದು ಆರ್ಬಿಟ್ ಸಂಸ್ಥೆಯ ಕಾರ್ಯಕರ್ತರ ಮುಖಾಂತರ ತಿಳಿದುಕೊಂಡು ಮಕ್ಕಳಿಗೆ ಚಟುವಟಿಕೆ ಮಾಡಿಸುತಿದ್ದೇವೆ. ನಮ್ಮ ಮಕ್ಕಳು ಬದಲಾವಣೆ ಹೊಂದಿದ್ದಾರೆ. ನಾವು ನಮ್ಮ ಮಕ್ಕಳೂ ಒಳ್ಳೆಯ ಮಕ್ಕಳ ಜೋತೆ ಬೆರೆತು ಆಟ ಆಡುವಂತೆ ಮಾಡುತ್ತೇವೆ ಎಂದೂ ಭರವಸೆ ವ್ಯಕ್ತಪಡಿಸಿದ್ದಾರೆ. ಆರ್ಬಿಟ್ ಸಂಸ್ಥೆಯವರಿಗೆ ನಮ್ಮ ಕುಟುಂಬದ ಪರವಾಗಿ ಧನ್ಯವಾದ ವ್ಯಕ್ತಪಡಿಸುತ್ತೇವೆ ಎಂದು ಪೋಷಕರು ತಿಳಿಸಿದ್ದಾರೆ.

## “ಬೆಳವಣಿಗೆ ಕುಂಠಿತ ವಿರುವ ಮಕ್ಕಳಿಗೆ ಸಾಧನೆ ಸಲಕರಣೆ ವಿತರಣಾ ಕಾರ್ಯಕ್ರಮ”



27 ಮೇ 2025ರಂದು ಹುಮನಾಬಾದ ತಾಲೂಕಿನ ಆರ್ಬಿಟ್ ಸಭಾಂಗಣದಲ್ಲಿ ಆರ್ಬಿಟ್ ಸಂಸ್ಥೆ ಹಾಗೂ ಎ.ಪಿ.ಡಿ ಇವರ ಸಂಯುಕ್ತ ಆಶ್ರಯದಲ್ಲಿ ಬೆಳವಣಿಗೆ ಕುಂಠಿತ ವಿರುವ ಮಕ್ಕಳಿಗೆ ಸಾಧನೆ ಸಲಕರಣೆ ವಿತರಣಾ ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು. ಈ ಕಾರ್ಯಕ್ರಮದಲ್ಲಿ ಸಂಸ್ಥೆಯ ನಿರ್ದೇಶಕರಾದ ಫಾದರ್ ವಿಕ್ಟರ್ ವಾಸರವರು ಮಾತನಾಡುತ್ತಾ ಆರೋಗ್ಯವೇ ಭಾಗ್ಯ ಆರೋಗ್ಯ ಕಾಪಾಡಿಕೊಳ್ಳುವುದು ನಮ್ಮ ಕರ್ತವ್ಯ. ಅನಾರೋಗ್ಯದಲ್ಲಿದ್ದಾಗ ಸಮಯ ವ್ಯರ್ಥ ಮಾಡದೆ ವೈಜ್ಞಾನಿಕವಾಗಿ ಚಿಕಿತ್ಸೆಯ ಪಡೆದು ಆರೋಗ್ಯದಲ್ಲಿ ಸುಧಾರಣೆ ಮಾಡಿಕೊಂಡು ಸಮುದಾಯ ಸಮಾಜದಲ್ಲಿ ಮುಂದೆ ಬರಲು ಎಲ್ಲರೂ ಪ್ರಯತ್ನಿಸಬೇಕೆಂದು ಹುರಿದುಂಬಿಸಿದರು. ಬೆಳವಣಿಗೆ ಕುಂಠಿತವಿರುವ ಮಕ್ಕಳಿಗಾಗಿ ನಮ್ಮ ಸಂಸ್ಥೆ ಸದಾಕಾಲ ಬೆನ್ನೆಲುಬಾಗಿ ಕಾರ್ಯನಿರ್ವಹಿಸುತ್ತಿದ್ದು ಮುಂದಿನ ದಿನಗಳಲ್ಲಿಯೂ ಕೂಡ ಸಂಸ್ಥೆಯು ತಮ್ಮೆಲ್ಲರಿಗಾಗಿ ಸದಾ ಸಿದ್ಧವಿರುತ್ತದೆ ಎಂದು ತಿಳಿಸಿದರು. ಈ ಕಾಯ್ಕ್ರಮವದಲ್ಲಿ ನಿರೂಪಣೆ ಕವಿತಾ, ಸ್ವಾಗತ ಸೂರ್ಯಕಾಂತ್, ವಂದನಾರ್ಪಣೆ ಮಮತಾ ಮಾಡಿದರು.

## “ಉಪ ಕೇಂದ್ರ ಆಧಾರಿತ ಚಟುವಟಿಕೆ”

26 ಮೇ 2025ರಂದು ಹುಮ್ನಾಬಾದ್ ತಾಲೂಕಿನ ಹಣಕುಣಿ ಗ್ರಾಮದಲ್ಲಿ ಬೆಳವಣಿಗೆಯಲ್ಲಿ ಕುಂಟಿತ ಹೊಂದಿರುವ ನಾಲ್ಕು ಮಕ್ಕಳಿಗೆ ಉಪ ಕೇಂದ್ರ ಆಧಾರಿತ ಚಟುವಟಿಕೆಯನ್ನು ಮಾಡಿಸಲಾಯಿತು. ಗೋಡೆ ಸಹಾಯದಿಂದ ನಡೆಯುವ ಚಟುವಟಿಕೆ ಮೂರು ಚಕ್ರದ ಗಾಡಿ ಮುಖಾಂತರ ಮುಂದೆ ಹೆಜ್ಜೆ ಇಡುವ ಚಟುವಟಿಕೆ ಮಾಡಿಸಲಾಯಿತು. ಎರಡು ಅಂಗನವಾಡಿ ಕೇಂದ್ರಗಳಿಗೆ ಭೇಟಿ ನೀಡಿ ದಹಿಕ ಮತ್ತು ಮಾನಸಿಕ ನ್ಯೂನತೆ ಉಳ್ಳ ಮಕ್ಕಳನ್ನು ಗುರುತಿಸಲು ದಹಿಕ  ದೈಹಿಕ ಮೌಲ್ಯಮಾಪನ ಕಾರ್ಯ ಮಾಡಲಾಯಿತು. ಒಟ್ಟು 20 ಮಕ್ಕಳಿಗೆ ದಹಿಕ ಮೌಲ್ಯಮಾಪನ ಮಾಡಲಾಯಿತು. ಮಕ್ಕಳ ತಲೆ ಸುತ್ತಳತೆ ಎದೆಯ ಸುತ್ತಳತೆ ಹಾಗೂ ಎತ್ತರ ಹಾಗೂ ತೋಳಿನ ಸುತ್ತಳತೆಯನ್ನು ಮಾಡಲಾಯಿತು. ಮಕ್ಕಳಿಗೆ ಇರುವಂತಹ ಸರ್ಕಾರಿ ಸೌಲಭ್ಯಗಳ ಕುರಿತು ಅಂಗನವಾಡಿ ಶಿಕ್ಷಕರಿಗೆ ಮಾಹಿತಿಯನ್ನು ತಿಳಿಸಲಾಯಿತು.





# "ನವಜೀವನ (ಎಲ್.ಎಲ್.ಎಲ್.ಏಫ್) ಕಾರ್ಯಕ್ರಮ"

## "ಪ್ರಥಮ ಹಂತದಲ್ಲಿ ಚಿಕಿತ್ಸೆಯನ್ನು ನೀಡಿದರೆ ಶೀಘ್ರವಾಗಿ ಗುಣಮುಖರಾಗುತ್ತಾರೆ"



06 ಮೇ 25 ರಂದು ಬಸವಕಲ್ಯಾಣ ತಾಲೂಕಿನಲ್ಲಿ ಸಾರ್ವಜನಿಕರಿಗೆ ಮಾನಸಿಕ ಆರೋಗ್ಯ ಕುರಿತು ಜಾಗೃತಿ ಕಾರ್ಯಕ್ರಮವನ್ನು ಅರ್ಬಿತ್ ಸಂಸ್ಥೆಯ ನವಜೀವನ ಎಲ್.ಎಲ್.ಎಲ್.ಏಫ್ ಇವರ ಸಂಯುಕ್ತ ಆಶ್ರಮದಲ್ಲಿ ಹಮ್ಮಿಕೊಳ್ಳಲಾಯಿತು. ಈ ಕಾರ್ಯಕ್ರಮದ ಕಾರ್ಯಕರ್ತೆಯಾದ ಶ್ರೀಮತಿ ಸುಜಾತ ಅವರು ಮಾತನಾಡಿ, ನಮ್ಮ ಆರ್ಬಿಟ್ ಸಂಸ್ಥೆಯು 30 ವರ್ಷದಿಂದ ಸಮಾಜಸೇವೆ ಮಾಡುತ್ತಲೇ ಬಂದಿದೆ. ಮಾನಸಿಕ ರೋಗವು ಹೇಗೆ ಹುಟ್ಟುತ್ತದೆ ಮತ್ತು ಅದರ ಕೆಲವು ಲಕ್ಷಣಗಳು, ಮಾನಸಿಕ ಕಾಯಿಲೆಗೆ ಒಳಗಾದ ವ್ಯಕ್ತಿಯು ಅವನ ನಡವಳಿಕೆಯು ಬಹಳ ವಿಚಿತ್ರವಾಗಿರುತ್ತದೆ, ಅಂದರೆ ಅವನು ತನ್ನಷ್ಟಕ್ಕೆ ತಾನೇ ನಗುವುದು, ಅಳುವುದು, ಒಬ್ಬಂಟಿಯಾಗಿ ಕುಳಿತುಕೊಳ್ಳುವುದು, ವಿಪರಿತವಾದ ಕೋಪ ಮಾಡಿಕೊಳ್ಳುವುದು ಹೀಗೆ ಮಾನಸಿಕ ವ್ಯಕ್ತಿಯ ಲಕ್ಷಣಗಳನ್ನು ಹೊಂದಿರುತ್ತಾರೆ. ಇಂತಹ ಲಕ್ಷಣಗಳನ್ನು ಹೊಂದಿದ್ದ ವ್ಯಕ್ತಿಗಳನ್ನು ನಾವು ಪ್ರಥಮ ಹಂತದಲ್ಲಿ ಚಿಕಿತ್ಸೆಯನ್ನು ನೀಡಿದರೆ ಅವರು ಶೀಘ್ರವಾಗಿ ಗುಣಮುಖರಾಗುತ್ತಾರೆ. ಮಾನಸಿಕ ಕಾಯಿಲೆಗೆ ಒಳಗಾದ ವ್ಯಕ್ತಿಯನ್ನು ಪ್ರತಿ ತಿಂಗಳು ಅವರ ಮನೆಗೆ ಹೋಗಿ ಅವರು ತೆಗೆದುಕೊಳ್ಳುವ ಮಾತ್ರೆಗಳನ್ನು ಪರಿಶೀಲಿಸಿ, ಒಂದು ವೇಳೆ ಅವರು ಮಾತ್ರೆಗಳನ್ನು ತೆಗೆದುಕೊಳ್ಳದೆ ಇದ್ದಲ್ಲಿ ಅವರಿಗೆ ನೋಡಿಕೊಳ್ಳುವರನ್ನು ನಾವು ಸರಿಯಾಗಿ ಮಾತ್ರೆಗಳನ್ನು ಕೊಡಲು ಹೇಳುತ್ತೇವೆ, ಏಕೆಂದರೆ ಮಾತ್ರೆಗಳನ್ನು ಒಂದು ದಿನ ತೆಗೆದುಕೊಂಡು ಮತ್ತೊಂದು ದಿನ ತೆಗೆದುಕೊಳ್ಳದೆ ಇದ್ದಲ್ಲಿ ಅವರ ಕಾಯಿಲೆಯಲ್ಲಿ ಯಾವುದೇ ಬದಲಾವಣೆಯನ್ನು ಹೊಂದಲು ಸಾಧ್ಯವಿಲ್ಲ ಎಂದು ಮನೆಯವರಿಗೆ ತಿಳಿಸುತ್ತೇವೆ. ಮತ್ತು ಅವರಿಗೆ ನಾವು ನಮ್ಮ ಸಂಸ್ಥೆ ವತಿಯಿಂದ ಯುಡಿಐಡಿ ಕಾರ್ಡ್ ಮಾಡಿಸಿಕೊಡುತ್ತೇವೆ. ಹೀಗೆ ನಮ್ಮ ಸಂಸ್ಥೆವತಿಯಿಂದ ಹಲವಾರು ರೀತಿಯ ಸರಕಾರಿಯ ಸೌಲಭ್ಯವನ್ನು ಒದಗಿಸಿ ಕೊಡುತ್ತೇವೆ ಎಂದು ಹೇಳಿದರು. ಈ ಕಾರ್ಯಕ್ರಮದಲ್ಲಿ ಒಟ್ಟು 20 ಜನ ಭಾಗವಹಿಸಿದ್ದರು ಇದರ ಸದುಪಯೋಗ ಪಡೆದುಕೊಂಡರು.

## "ಮಾನಸಿಕ ಆರೋಗ್ಯ ಕುರಿತು ಜಾಗೃತಿಕ ಕಾರ್ಯಕ್ರಮ"



09 ಮೇ 25 ರಂದು ಬಸವಕಲ್ಯಾಣ್ ತಾಲೂಕಿನ ಹುಲಗುತ್ತಿ ಗ್ರಾಮದ ಗ್ರಾಮಸ್ಥರಿಗೆ ಮಾನಸಿಕ ಆರೋಗ್ಯ ಕುರಿತು ಜಾಗೃತಿಕ ಕಾರ್ಯಕ್ರಮವನ್ನು ಆರ್ಬಿಟ್ ಸಂಸ್ಥೆಯ ನವಜೀವನ ಎಲ್.ಎಲ್.ಎಲ್.ಎಫ್ ಇವರ ಸಂಯುಕ್ತ ಆಶ್ರಮದಲ್ಲಿ ನಡೆಸಲಾಯಿತು. ಈ ಕಾರ್ಯಕ್ರಮದ ಕಾರ್ಯಕರ್ತೆಯಾದ ಶ್ರೀಮತಿ ಸುಜಾತ ಅವರು ಮಾತನಾಡಿ ಆರ್ಬಿಟ್ ಸಂಸ್ಥೆಯು 30 ವರ್ಷಗಳಿಂದ ಬಡ ಜನರಿಗೋಸ್ಕರ ಹಗಲಿರುಳು ದುಡಿಯುತ್ತಿದೆ. ಇತ್ತೀಚಿಗೆ ಎರಡು ವರ್ಷಗಳಿಂದ ಮಾನಸಿಕ ಅಸ್ವಸ್ಥರ ಮಧ್ಯದಲ್ಲಿ ಸೇವೆ ಸಲ್ಲಿಸುತ್ತಿದೆ. ಪ್ರಾಥಮ ಹಂತದಲ್ಲಿ ಪತ್ತೆ ಹಚ್ಚಿ ಅವರನ್ನು ಜಿಲ್ಲಾ ಮಾನಸಿಕ ಆರೋಗ್ಯ ಶಿಬಿರದಲ್ಲಿ ಮನೋವೈದ್ಯರಿಂದ ಉಚಿತ ತಪಾಸಣೆ ಹಾಗೂ ಚಿಕಿತ್ಸೆ ಸೌಲಭ್ಯ ವ್ಯವಸ್ಥೆಯು ಕಲ್ಪಿಸಲಾಗುತ್ತದೆ. ಸತತವಾಗಿ ಮಾತ್ರೆಗಳನ್ನು ಸೇವಿಸಿದ ಪರಿಣಾಮದಿಂದ ಅನೇಕ ವ್ಯಕ್ತಿಗಳು ಗುಣಮುಖರಾಗಿ ತಮ್ಮ ಹಿಂದಿನ ಜೀವನಕ್ಕೆ ಹಿಂತಿರುಗುವ ಯಶಸ್ವಿನ ಕಥೆಗಳು ಹೊಂದಿದ್ದೇವೆ. ಇಂತಹವರಿಗೆ ಜೀವನೋಪಕ್ಕಾಗಿ ಔದ್ಯೋಗಿಕ ತರಬೇತಿಗಳು ಸಹ ನೀಡಲಾಗುತ್ತಿದೆ ಎಂದು ತಿಳಿಸಿದರು. ಈ ಕಾರ್ಯಕ್ರಮದಲ್ಲಿ 20 ಜನರು ಭಾಗವಹಿಸಿದ್ದರು ಇದರ ಸದುಪಯೋಗ ಪಡೆದುಕೊಂಡರು.

## "30 ವರ್ಷಗಳಿಂದ ಬಡ ಜನರಿಗೋಸ್ಕರ ಹಗಲಿರುಳು ದುಡಿಯುತ್ತಿದೆ ಆರ್ಬಿಟ್ ಸಂಸ್ಥೆ"



10 ಮೇ 25 ರಂದು ಬೀದರ್ ಜಿಲ್ಲೆಯ ಕಮಠಾಣ ಗ್ರಾಮದಲ್ಲಿ ಮಾನಸಿಕ ಆರೋಗ್ಯ ಕುರಿತು ಜಾಗೃತಿ ಕಾರ್ಯಕ್ರಮವನ್ನು ಮಾಡಲಾಯಿತು. ಆರ್ಬಿಟ್ ಸಂಸ್ಥೆಯ ನವಜೀವನ ಎಲ್.ಎಲ್.ಎಲ್.ಎಫ್ ಕಾರ್ಯಕ್ರಮದ ಇವರ ಸಂಯುಕ್ತ ಆಶ್ರಯದಲ್ಲಿ, ನಡೆಸಲಾಯಿತು. ಈ ಕಾರ್ಯಕ್ರಮದ ಕಾರ್ಯಕರ್ತರಾದ ಕುಮಾರ ಅಭಿಷೇಕ್ ಅವರು ಮಾತನಾಡಿ, ಆರ್ಬಿಟ್ ಸಂಸ್ಥೆಯು 30 ವರ್ಷಗಳಿಂದ ಬಡ ಜನರಿಗೋಸ್ಕರ ಹಗಲಿರುಳು ದುಡಿಯುತ್ತಿದೆ, ಇತ್ತೀಚಿಗೆ ಎರಡು ವರ್ಷಗಳಿಂದ ಮಾನಸಿಕ ಅಸ್ವಸ್ಥರ ಮಧ್ಯದಲ್ಲಿ ಸೇವೆ ಸಲ್ಲಿಸುತ್ತಿದೆ, ಪ್ರಾಥಮಿಕವಾಗಿ ಪತ್ತೆ ಹಚ್ಚಿ ಅವರನ್ನು ಜಿಲ್ಲಾ ಮಾನಸಿಕ ಆರೋಗ್ಯ ಶಿಬಿರದಲ್ಲಿ ಮನೋವೈದ್ಯರಿಂದ ಉಚಿತ ತಪಾಸಣೆ ಹಾಗೂ ಚಿಕಿತ್ಸೆಯ ಸೌಲಭ್ಯ ವ್ಯವಸ್ಥೆಯೂ ಕಲ್ಪಿಸಲಾಗುತ್ತದೆ. ಸತತವಾಗಿ ಮಾತ್ರೆಗಳನ್ನು ಸೇವಿಸಿದ ಪರಿಣಾಮದಿಂದ ಆನೇಕ ವ್ಯಕ್ತಿಗಳು ಗುಣಮುಖರಾಗಿ ತಮ್ಮ ಹಿಂದಿನ ಜೀವನಕ್ಕೆ ತಿರುಗಿರುವ ಯಶಸ್ಸಿನ ಕಥೆಗಳು ಹೊಂದಿದ್ದೇವೆ, ಇಂಥವರಿಗೆ ಜೀವನೋಪಾಯಕ್ಕಾಗಿ ಔದ್ಯೋಗಿಕ ತರಬೇತಿಗಳು ಸಹ ನೀಡಲಾಗುತ್ತಿದೆ ಎಂದು ತಿಳಿಸಿದರು. ಈ ಕಾರ್ಯಕ್ರಮದಲ್ಲಿ 10 ಜನರು ಭಾಗವಹಿಸಿದರು.

## “ನರೇಗಾ ಕೆಲಸ ಮಾಡುತ್ತಿರುವ ಸಾರ್ವಜನಿಕರಿಗೆ ಜಾಗೃತಿಕ ಕಾರ್ಯಕ್ರಮ”



15 ಮೇ 2025ರಂದು ಬಸವಕಲ್ಯಾಣ ತಾಲೂಕಿನ ಕಿಟ್ಟ ಗ್ರಾಮದಲ್ಲಿ ನರೇಗಾ ಕೆಲಸ ಮಾಡುತ್ತಿರುವ ಸಾರ್ವಜನಿಕರಿಗೆ ಆರ್ಬಿಟ್ ಸಂಸ್ಥೆಯ ನವಜೀವನ ಎಲ್.ಎಲ್.ಎಲ್.ಎಫ್ ಕಾರ್ಯಕ್ರಮದ ಸಂಯುಕ್ತ ಆಶ್ರಮದಲ್ಲಿ ಮಾನಸಿಕ ಆರೋಗ್ಯ ಕುರಿತು ಜಾಗೃತಿಕ ಕಾರ್ಯಕ್ರಮವನ್ನು ಆಯೋಜಿಸಲಾಯಿತು. ಈ ಕಾರ್ಯಕ್ರಮದ ಕಾರ್ಯಕರ್ತೆಯಾದ ಶ್ರೀಮತಿ ಸುಜಾತ ಅವರು ಮಾತನಾಡಿ, ಆರ್ಬಿಟ್ ಸಂಸ್ಥೆಯು ಸುಮಾರು 30 ವರ್ಷಗಳಿಂದ ಸಮಾಜದಿಂದ ಹಂಚಿಗೆ ತಳ್ಳಲ್ಪಟ್ಟ ಬಡ ಜನರಿಗೋಸ್ಕರ ಹಗಲಿರುಳು ದುಡಿಯುತ್ತಿದ್ದು ಇತ್ತೀಚಿಗೆ ಎರಡು ವರ್ಷಗಳಿಂದ ಮಾನಸಿಕ ಅಸ್ವಸ್ಥರ ಮಧ್ಯದಲ್ಲಿ ಸೇವೆ ಸಲ್ಲಿಸುತ್ತಿದೆ. ಪ್ರಾಥಮಿಕವಾಗಿ ಪತ್ತೆ ಹಚ್ಚಿ ಅವರನ್ನು ಜಿಲ್ಲಾ ಮಾನಸಿಕ ಆರೋಗ್ಯ ಶಿಬಿರದಲ್ಲಿ ಮನೋವೈದ್ಯರಿಂದ ಉಚಿತ ತಪಾಷಣೆ ಹಾಗೂ ಚಿಕಿತ್ಸೆಯ ಸೌಲಭ್ಯಗಳು ವ್ಯವಸ್ಥೆ ಇರುತ್ತದೆ. ಈ ಕಾಯಿಲೆಗೆ ತುತ್ತಾಗಿರುವ ವ್ಯಕ್ತಿಗಳು ಸತತವಾಗಿ ಮಾತ್ರೆಗಳು ತೆಗೆದುಕೊಳ್ಳುವುದರಿಂದ ಗುಣಮುಖರಾಗಿ ತಮ್ಮ ಹಿಂದಿನ ಜೀವನಕ್ಕೆ ಹಿಂತಿರುಗುವ ಅನೇಕ ಯಶಸ್ವಿನ ಕಥೆಗಳು ಹೊಂದಿದ್ದೇವೆ, ಇಂತಹ ವ್ಯಕ್ತಿಗಳು ಕಂಡುಬಂದಲ್ಲಿ ಆರ್ಬಿಟ್ ಸಂಸ್ಥೆಯ ಸಹಾಯವಾಣಿ ಸಂಖ್ಯೆ 9036664271 ಕರೆ ಮಾಡಿ ಮಾಹಿತಿ ನೀಡಬೇಕೆಂದು ತಿಳಿಸಲಾಯಿತು ಈ ಕಾರ್ಯಕ್ರಮದಲ್ಲಿ ಒಟ್ಟು 42 ಜನರು ಭಾಗವಹಿಸಿದ್ದರು ಇದರ ಸದುಪಯೋಗ ಪಡೆದುಕೊಂಡರು

## “ಜಿಲ್ಲಾ ಮಾನಸಿಕ ಆರೋಗ್ಯ ಶಿಬಿರದಲ್ಲಿ ಮನೋವೈದ್ಯರಿಂದ ಉಚಿತ ತಪಾಸಣೆ”



14 ಮೇ 2025ರಂದು ಬಸವಕಲ್ಯಾಣ ತಾಲೂಕಿನ ಹಣಮಂತವಾಡಿ ಗ್ರಾಮದಲ್ಲಿ ಆರ್ಬಿಟ್ ಸಂಸ್ಥೆಯ ನವಜೀವನ ಎಲ್.ಎಲ್.ಎಲ್.ಎಫ್ ಕಾರ್ಯಕ್ರಮದ ಸಂಯುಕ್ತ ಆಶ್ರಯದಲ್ಲಿ ಮಾನಸಿಕ ಆರೋಗ್ಯ ಕುರಿತು ಜಾಗೃತಿ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಈ ಕಾರ್ಯಕ್ರಮದ ಕಾರ್ಯಕರ್ತರಾದ ಶ್ರೀ ವಿಜಯಕುಮಾರ್ ಅವರು ಮಾತನಾಡಿ, ಆರ್ಬಿಟ್ ಸಂಸ್ಥೆಯು ಸುಮಾರು 30 ವರ್ಷಗಳಿಂದ ಸಮಾಜದಿಂದ ಅಂಚಿಗೆ ತಳಲ್ಪಟ್ಟ ಬಡ ಜನರಿಗೋಸ್ಕರ ಹಗಲಿರುಳು ದುಡಿಯುತ್ತಿದ್ದು, ಇತ್ತೀಚಿಗೆ ಎರಡು ವರ್ಷಗಳಿಂದ ಮಾನಸಿಕ ಅಸ್ವಸ್ಥರ ಮಧ್ಯದಲ್ಲಿ ಸೇವೆ ಸಲ್ಲಿಸುತ್ತಿದೆ, ಪ್ರಾಥಮಿಕವಾಗಿ ಪತ್ತೆ ಹಚ್ಚಿ ಅವರನ್ನು; ಜಿಲ್ಲಾ ಮಾನಸಿಕ ಆರೋಗ್ಯ ಶಿಬಿರದಲ್ಲಿ ಮನೋವೈದ್ಯರಿಂದ, ಉಚಿತ ತಪಾಸಣೆ ಹಾಗೂ ಚಿಕಿತ್ಸೆಯ ಸೌಲಭ್ಯಗಳ ವ್ಯವಸ್ಥೆ ಇರುತ್ತದೆ. ಈ ಕಾಯಿಲೆಗೆ ತುತ್ತಾಗಿರುವ ವ್ಯಕ್ತಿಗಳು ಸತತವಾಗಿ ಮಾತ್ರೆಗಳು ತೆಗೆದುಕೊಳ್ಳುವುದರಿಂದ ಗುಣಮುಖರಾಗಿ ತಮ್ಮ ಹಿಂದಿನ ಜೀವನಕ್ಕೆ ತಿರುಗಿರುವ ಅನೇಕ ಯಶಸ್ವಿನ ಕಥೆಗಳು ಹೊಂದಿದ್ದೇವೆ. ಇಂತಹ ವ್ಯಕ್ತಿಗಳು ಕಂಡುಬಂದಲ್ಲಿ ಆರ್ಬಿಟ್ ಸಂಸ್ಥೆಯ ಸಹಾಯ ವಾಣಿ ಸಂಖ್ಯೆ 9036664271 ಕರೆ ಮಾಡಿ ಮಾಹಿತಿ ನೀಡಬೇಕೆಂದು ತಿಳಿಸಲಾಯಿತು. ಈ ಕಾರ್ಯಕ್ರಮದಲ್ಲಿ ಗ್ರಾಮದ 11 ಜನರು ಭಾಗವಹಿಸಿ ಇದರ ಸದುಪಯೋಗ ಪಡೆದುಕೊಂಡರು.

## “ಮಾನಸಿಕ ಆರೋಗ್ಯ ಕುರಿತು ಜಾಗೃತಿಕ ಕಾರ್ಯಕ್ರಮ”



12 ಮೇ 2025ರಂದು ಬಸವಕಲ್ಯಾಣ ತಾಲೂಕಿನ ಮಂಗಳೂರು ಗ್ರಾಮದಲ್ಲಿ ಆರ್ಬಿಟ್ ಸಂಸ್ಥೆಯ ನವಜೀವನ ಎಲ್.ಎಲ್.ಎಲ್.ಎಫ್ ಕಾರ್ಯಕ್ರಮದ ಸಂಯುಕ್ತ ಆಶ್ರಯದಲ್ಲಿ ಮಾನಸಿಕ ಆರೋಗ್ಯ ಕುರಿತು ಜಾಗೃತಿ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಈ ಕಾರ್ಯಕ್ರಮದ ಕಾರ್ಯಕರ್ತರಾದ ಶ್ರೀ ವಿಜಯಕುಮಾರ್ ಅವರು ಮಾತನಾಡಿ, ಮಾನಸಿಕ ಆರೋಗ್ಯ ಎಂದರೇನು? ಮಾನಸಿಕ ಅಸ್ವಸ್ಥರ ಲಕ್ಷಣಗಳು ಮತ್ತು ಈ ರೋಗಕ್ಕೆ ಕಾರಣಗಳು ತಿಳಿಸಿದರು. ಇಂಥವರನ್ನು ಪ್ರಾಥಮಿಕವಾಗಿ ಪತ್ತೆ ಹಚ್ಚಿ ಅವರನ್ನು ಜಿಲ್ಲಾ ಮಾನಸಿಕ ಆರೋಗ್ಯ ಶಿಬಿರದಲ್ಲಿ ಮನೋವೈದ್ಯರಿಂದ ಉಚಿತ ತಪಾಸಣೆ ವಳಪಡಿಸಬೇಕು ಹಾಗೂ ಚಿಕಿತ್ಸೆಯ ಸೌಲಭ್ಯದ ಹೊಂದುವುದರ ಬಗ್ಗೆ ಮಾಹಿತಿ ನೀಡಿದರು. ತೀವ್ರಗತಿಯಿಂದ ಮಾನಸಿಕ ಕಾಯಿಲೆಗೆ ಒಳಗಾದ ವ್ಯಕ್ತಿಗಳಿಗೆ ಆರ್ಬಿಟ್ ಸಂಸ್ಥೆಯ ಕಾರ್ಯಕರ್ತರ ಮೂಲಕ ಸಾಮಾಜಿಕ ಭದ್ರತೆ ಯೋಜನೆಯ ಅಡಿಯಲ್ಲಿ ಸಹಾಯ ಮಾಡುತ್ತಿದ್ದೆವೆ ಎಂದು ಹೇಳಿದರು. ಈ ಕಾರ್ಯಕ್ರಮದಲ್ಲಿ 14 ಜನರು ಭಾಗವಹಿಸಿ ಇದರ ಸದುಪಯೋಗ ಪಡೆದುಕೊಂಡರು.

## “ಭಾಲ್ಕಿ ಸಾರ್ವಜನಿಕ ಆಸ್ಪತ್ರೆಯಲ್ಲಿ ಜಿಲ್ಲಾ ಮಾನಸಿಕ ಶಿಬಿರ”



12 ಮೇ 2025 ರಂದು ಭಾಲ್ಕಿ ತಾಲೂಕಿನ ಕಾಸರತುಗಾಂವ್ ಗ್ರಾಮದಲ್ಲಿ ಮಾನಸಿಕ ಅಸ್ವಸ್ಥರ ಕುರಿತು ಜಾಗೃತಿ ಮೂಡಿಸಲಾಯಿತು. ಆರ್ಬಿಟ್ ಸಂಸ್ಥೆಯ ಎಲ್.ಎಲ್.ಎಲ್.ಎಫ್ ಕಾರ್ಯಕರ್ತರಾದ ಶ್ರೀ ಪ್ರದೀಪ್ ಅವರು ಆಗಿದ್ದರು, ಒಂದು ವ್ಯಕ್ತಿಗೆ ಮಾನಸಿಕ ರೋಗ ಹೇಗೆ ಬರುತ್ತದೆ ಎಂಬುದಾಗಿ ವಿವರಿಸಿದರು. ಅಂದರೆ ಒಂದು ವ್ಯಕ್ತಿಯ ಜೀವನದಲ್ಲಿ ಆದಂತ ಕಹಿ ಘಟನೆಯನ್ನು ಪುನಃ ಪುನಃ ನೆನಪು ಮಾಡಿ ಖಿನ್ನತೆಗೆ ಒಳಗಾಗಿ ಮಾನಸಿಕ ರೋಗಕ್ಕೆ ತುತ್ತಾಗಿರುತ್ತಾನೆ. ಈ ರೋಗವು ಒಂದು ಮೆದುಳಿನ ರೋಗ, ಮೆದುಳಿನಲ್ಲಿ ಇರುವಂತಹ ರಾಸಾಯನಿಕ ಕ್ರಿಯೆಗಳಲ್ಲಿ ಬದಲಾವಣೆ ಉಂಟಾದಾಗ ಅಥವಾ ಏರುಪೇರು ಉಂಟಾದಾಗ ಮನುಷ್ಯನು ಈ ರೋಗಕ್ಕೆ ತುತ್ತಾಗುತ್ತಾನೆ. ಈ ರೋಗದ ಲಕ್ಷಣಗಳೆಂದರೆ ವಿನಾಕಾರಣ ಅಳುವುದು, ವಿನಾಕಾರಣ ನಗುವುದು, ಬೀದಿ ಸುತ್ತುವುದು, ಚಿಕ್ಕ ಚಿಕ್ಕ ವಸ್ತುಗಳನ್ನು ಸಂಗ್ರಹಿಸುವುದು, ಅನುಮಾನ ಪಡುವುದು, ಕೋಪ ಮಾಡಿಕೊಳ್ಳುವುದು, ಯಾರಿಗೆ ಕೇಳಿಸಲಾರದಂತ ಶಬ್ದವನ್ನು ಕೇಳಿಸುವುದು ಮುಂತಾದ ಲಕ್ಷಣಗಳು ಕಂಡುಬರುತ್ತವೆ. ಈ ಲಕ್ಷಣಗಳು ಕಂಡುಬಂದರೆ ವೈದ್ಯರ ಸಲಹೆ ಪಡೆಯುವುದು ಎಂದು ಸಲಹೆ ನೀಡಲಾಯಿತು. ತಿಂಗಳಿನ ಎರಡನೇ ಮಂಗಳವಾರ ಭಾಲ್ಕಿ ಸಾರ್ವಜನಿಕ ಆಸ್ಪತ್ರೆಯಲ್ಲಿ ಜಿಲ್ಲಾ ಮಾನಸಿಕ ಶಿಬಿರ ಇರುತ್ತದೆ. ಈ ಶಿಬಿರದಲ್ಲಿ ಬಂದು ಉಚಿತ ಚಿಕಿತ್ಸೆಯನ್ನು ಪಡೆಯಬಹುದು ಎಂದು ತಿಳಿಸಿದರು. ಇಂಥಹ ಲಕ್ಷಣ ಇರುವವರು ನಿಮ್ಮಲ್ಲಿ ಕಂಡುಬಂದರೆ ನಮ್ಮ ಸಂಸ್ಥೆಯ ಸಹಾಯವಾಣಿ ಸಂಖ್ಯೆ 9036664271 ಕರೆಮಾಡಿ ಮಾಹಿತಿ ನೀಡುವುದು ಎಂದು ಜಾಗೃತಿ ಮೂಡಿಸಲಾಯಿತು. ಈ ಜಾಗೃತಿ ಕಾರ್ಯಕ್ರಮದಲ್ಲಿ ಗ್ರಾಮದ 20 ಜನ ಭಾಗಿಯಾಗಿದ್ದರು.

## “ಮಾನಸಿಕ ಅಸ್ವಸ್ಥರ ಕುರಿತು ಜಾಗೃತಿ ಕಾರ್ಯಕ್ರಮ”



06 ಮೇ 2025 ರಂದು ಭಾಲ್ಕಿ ತಾಲೂಕಿನ ಆನಂದವಾಡಿ ಗ್ರಾಮದಲ್ಲಿ ಮಾನಸಿಕ ಅಸ್ವಸ್ಥರ ಕುರಿತು ಜಾಗೃತಿ ಮೂಡಿಸಲಾಯಿತು. ಈ ಜಾಗೃತಿ ಕಾರ್ಯಕ್ರಮವು ಆರ್ಬಿಟ್ ಸಂಸ್ಥೆಯ ಎಲ್.ಎಲ್.ಎಲ್.ಎಫ್ ಕಾರ್ಯಕರ್ತರಾದ ಶ್ರೀ ಪ್ರದೀಪ್ ಅವರು ಮಾರನಾದಿ, ಒಂದು ವ್ಯಕ್ತಿಗೆ ಮಾನಸಿಕ ರೋಗ ಹೇಗೆ ಬರುತ್ತದೆ ಎಂಬುದಾಗಿ ವಿವರಿಸಿದರು. ಅಂದರೆ ಒಂದು ವ್ಯಕ್ತಿಯ ಜೀವನದಲ್ಲಿ ಆದಂತ ಕಹಿ ಘಟನೆಯನ್ನು ಪುನಃ ಪುನಃ ನೆನಪು ಮಾಡಿ ಖಿನ್ನತೆಗೆ ಒಳಗಾಗಿ ಮಾನಸಿಕ ರೋಗಕ್ಕೆ ತುತ್ತಾಗಿರುತ್ತಾನೆ. ಈ ರೋಗವು ಒಂದು ಮೆದುಳಿನ ರೋಗ, ಮೆದುಳಿನಲ್ಲಿ ಇರುವಂತಹ ರಾಸಾಯನಿಕ ಕ್ರಿಯೆಗಳಲ್ಲಿ ಬದಲಾವಣೆ ಉಂಟಾದಾಗ ಅಥವಾ ಏರುಪೇರು ಉಂಟಾದಾಗ ಮನುಷ್ಯನು ಈ ರೋಗಕ್ಕೆ ತುತ್ತಾಗುತ್ತಾನೆ. ಈ ರೋಗದ ಲಕ್ಷಣಗಳೆಂದರೆ ವಿನಾಕಾರಣ ಅಳುವುದು, ವಿನಾಕಾರಣ ನಗುವುದು, ಬೀದಿ ಸುತ್ತುವುದು, ಚಿಕ್ಕ ಚಿಕ್ಕ ವಸ್ತುಗಳನ್ನು ಸಂಗ್ರಹಿಸುವುದು, ಅನುಮಾನ ಪಡುವುದು, ಕೋಪ ಮಾಡಿಕೊಳ್ಳುವುದು, ಯಾರಿಗೆ ಕೇಳಿಸಲಾರದಂತ ಶಬ್ದವನ್ನು ಕೇಳಿಸುವುದು ಮುಂತಾದ ಲಕ್ಷಣಗಳು ಕಂಡುಬರುತ್ತವೆ. ಈ ಲಕ್ಷಣಗಳು ಕಂಡುಬಂದರೆ ವೈದ್ಯರ ಸಲಹೆ ಪಡೆಯುವುದು ಎಂದು ಸಲಹೆ ನೀಡಲಾಯಿತು. ತಿಂಗಳಿನ ಎರಡನೇ ಮಂಗಳವಾರ ಭಾಲ್ಕಿ ಸಾರ್ವಜನಿಕ ಆಸ್ಪತ್ರೆಯಲ್ಲಿ ಜಿಲ್ಲಾ ಮಾನಸಿಕ ಶಿಬಿರ ಇರುತ್ತದೆ. ಈ ಶಿಬಿರದಲ್ಲಿ ಬಂದು ಉಚಿತ ಚಿಕಿತ್ಸೆಯನ್ನು ಪಡೆಯಬಹುದು ಎಂದು ತಿಳಿಸಿದರು. ಇಂಥಹ ಲಕ್ಷಣ ಇರುವವರು ನಿಮ್ಮಲ್ಲಿ ಕಂಡುಬಂದರೆ ನಮ್ಮ ಸಂಸ್ಥೆಯ ಸಹಾಯವಾಣಿ ಸಂಖ್ಯೆ 9036664271 ಕರೆಮಾಡಿ ಮಾಹಿತಿ ನೀಡುವುದು ಎಂದು ಜಾಗೃತಿ ಮೂಡಿಸಲಾಯಿತು. ಈ ಜಾಗೃತಿ ಕಾರ್ಯಕ್ರಮದಲ್ಲಿ ಗ್ರಾಮದ 30 ಜನ ಭಾಗಿಯಾಗಿದ್ದರು.

## “ಮಾನಸಿಕ ಆರೋಗ್ಯ ಕುರಿತು ಜಾಗೃತಿಕ ಕಾರ್ಯಕ್ರಮ”



21 ಮೇ 2025 ರಂದು ಬೀದರ್ ತಾಲೂಕಿನ ಮಿರ್ಜಾಪುರ್ ಗ್ರಾಮದಲ್ಲಿ ಮಾನಸಿಕ ಆರೋಗ್ಯದ ಕುರಿತು ಜಾಗೃತಿ ಕಾರ್ಯಕ್ರಮವನ್ನು ನೀಡಲಾಯಿತು. ಈ ಕಾರ್ಯಕ್ರಮವನ್ನು ಎಲ್.ಎಲ್.ಎಲ್.ಎಫ್ ಕಾರ್ಯಕರ್ತರಾದ ಕುಮಾರ ಅಭಿಷೇಕ್ ಅವರು ನಡೆಸಿದರು. ಮಾನಸಿಕ ಆರೋಗ್ಯ ಎಂದರೇನು? ಮಾನಸಿಕ ಅಸ್ವಸ್ಥತೆಯ ಲಕ್ಷಣಗಳು ಏನು? ಮಾನಸಿಕ ಕಾಯಿಲೆಗೆ ಕಾರಣಗಳು ಲಕ್ಷಣಗಳು ಏನು? ಮತ್ತು ಚಿಕಿತ್ಸೆಯ ವಿಧಾನಗಳನ್ನು ಏನು? ಎಂಬುದರ ಬಗ್ಗೆ ಜಾಗೃತಿ ಮೂಡಿಸಲಾಯಿತು. ಭಯ, ಆತಂಕ, ಖಿನ್ನತೆ, ನಿದ್ರಾಹೀನತೆ, ಸಿಟ್ಟು ಆತ್ಮಹತ್ಯೆಯಂತಹ ಆಲೋಚನೆಗಳು ಕಂಡುಬಂದಲ್ಲಿ ನಮ್ಮ ಸಂಸ್ಥೆಯ ಸಹಾಯವಾಣಿ ಸಂಖ್ಯೆ 9036664271 ಗೆ ಕರೆಮಾಡಿ ಸಹಾಯ ಪಡೆಯಬಹುದು. ಎಂದು ತಿಳಿಸಲಾಯಿತು. ಮಾನಸಿಕ ಅಸ್ವಸ್ಥತೆಯ ಕುರಿತು ಇರುವ ಮೂಢ ನಂಬಿಕೆಗಳನ್ನು ಹೋಗಲಾಡಿಸಲು ಗ್ರಾಮಸ್ಥರು ಮುಂದಾಗಿ ಸಹಕರಿಸಬೇಕು ಎಂದು ತಿಳಿಸಿದರು. ಈ ಜಾಗೃತಿ ಕಾರ್ಯಕ್ರಮದಲ್ಲಿ ಒಟ್ಟು 14 ಗ್ರಾಮಸ್ಥರು ಭಾಗವಹಿಸಿದರು.

## “ಜನ ಜಾಗೃತಿ ಕಾರ್ಯಕ್ರಮ”



10 ಮೇ 2025 ರಂದು ಕಮಾಲ್ನಾಗರ್ ತಾಲೂಕಿನ ಮುಧೋಳ್ (ಬಿ) ಗ್ರಾಮದಲ್ಲಿ ಎಲ್.ಎಲ್.ಎಲ್.ಎಫ್ ಕಾರ್ಯಕ್ರಮದ ಕಾರ್ಯಕರ್ತೆಯಾದ ಕುಮಾರಿ ಸಂಗೀತಾ ರವರು ಜನಜಾಗೃತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು. ಮಾನಸಿಕ ಅಸ್ವಸ್ಥತೆ ಎಂದರೇನು? ಮಾನಸಿಕ ಅಸ್ವಸ್ಥತೆಯ ಲಕ್ಷಣಗಳನ್ನು, ಮಾನಸಿಕ ಕಾಯಿಲೆಗೆ ಒಳಗಾಗಿದ್ದ ವ್ಯಕ್ತಿಗಳನ್ನು ಯಾವ ರೀತಿಯಾಗಿ ಪತ್ತೆ ಹಚ್ಚಬೇಕು ಎಂಬುದನ್ನು ತಿಳಿಸಲಾಯಿತು. ಇದು ಒಂದು ಮೆದುಳಿನ ಕಾಯಿಲೆಯಾಗಿದೆ. ಈ ಕಾಯಿಲೆ ಎಲ್ಲರಿಗೂ ಬರಬಹುದು. ಈ ಕಾಯಿಲೆ ಬಂದಂತ ವ್ಯಕ್ತಿಗಳ ನಡುವಳಿಕೆ ವಿಚಿತ್ರವಾಗಿ ವರ್ತಿಸುತ್ತಾರೆ. ತನ್ನಷ್ಟಕ್ಕೆ ತಾನು ಮಾತಾಡುವದು, ನಿದ್ದೆ ಮಾಡುವದು, ವಿನಾಕಾರಣ ಅಳುವದು, ವಿನಃ ಕಾರಣ ಸಿಟ್ಟು ಮಾಡುವದು. ಹೀಗೆ ಮಾನಸಿಕ ಹೊಂದಿರುವ ವ್ಯಕ್ತಿಯನ್ನು ಮೂಢನಂಬಿಕೆಗೆ ಬಲಿಯಾಗದೆ ಅವರಿಗೆ ಸರಿಯಾಗಿ ಚಿಕಿತ್ಸೆ ಕೊಡುವುದರ ಮೂಲಕ ಅವರ ಸ್ವಲ್ಪವಾಗಿ ಬದಲಾವಣೆಯನು ಹೊಂದಬೇಕು ಎಂದು ತಿಳಿಸಿರದಿ. ಈ ಕಾರ್ಯಕ್ರಮದಲ್ಲಿ ಒಟ್ಟು 10 ಜನರು ಭಾಗಹಿಸಿದ್ದರು.

## “ಭಾರತ್ ಸುಗಮ ಯಾತ್ರಾ ಕಾರ್ಯಕ್ರಮದ ಅನುಷ್ಠಾನಕ್ಕಾಗಿ ಗ್ರಾಮೀಣ ಪೂನರ್ವಸತಿ ಕಾರ್ಯಕ್ರಮ”




16 ಮೇ 2025 ರಂದು ಬೀದರ್ ಪಟ್ಟಣದ ಜಿಲ್ಲಾ ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಬೀದರ ಮತ್ತು ದಿ ಅಸೋಸಿಯೇಷನ್ ಆಫ್ ಪೀಪಲ್ ವಿಥ್ ದಿಸಾಬಿಲಿಟಿ (APD) ಸಂಸ್ಥೆ ಬೆಂಗಳೂರು ಇವರ ಸಹಯೋಗದಲ್ಲಿ "ಭಾರತ್ ಸುಗಮ ಯಾತ್ರಾ ಕಾರ್ಯಕ್ರಮದ ಅನುಷ್ಠಾನಕ್ಕಾಗಿ ಗ್ರಾಮೀಣ ಪೂನರ್ವಸತಿ ಕಾರ್ಯಕರ್ತರಿಗೆ ಹಮ್ಮಿಕೊಳ್ಳಲಾದ ತರಬೇತಿ ಕಾರ್ಯಾಗಾರದಲ್ಲಿ ಆರ್ಬಿಟ್ ಸಂಸ್ಥೆ ಹಾಗೂ ನವಜೀವನ ಲೀವ್.ಲವ್.ಲಾಫ್ ಫೌಂಡೇಶನ್ ಕಾರ್ಯಕ್ರಮದ ಸಂಯುಕ್ತ ಆಶ್ರಯದಲ್ಲಿ ಕಾರ್ಯಕರ್ತರಾದ ಶ್ರೀ ಆನಂದ್ ರವರು ಬೀದರ್ ತಾಲೂಕಿನ ಗ್ರಾಮೀಣ ಪೂನರ್ವಸತಿ ಕಾರ್ಯಕರ್ತರಿಗೆ, ಆರ್ಬಿಟ್ ಸಂಸ್ಥೆಯ ಸಾಮಾಜಿಕ ಕಾರ್ಯಾಚಟುವಟಿಕೆಗಳ ಬಗ್ಗೆ ಮತ್ತು ಮಾನಸಿಕ ಆರೋಗ್ಯದ ಜಾಗೃತಿ ಕುರಿತು ತಿಳಿಸಿದರು. ಆರ್ಬಿಟ್ ಸಂಸ್ಥೆಯು ಕಳೆದ 2 ವರ್ಷದಿಂದ ಸುಮಾರು 1500 ಮಾನಸಿಕ ಅಸ್ವಸ್ಥ ವ್ಯಕ್ತಿಗಳನ್ನು ಪತ್ತೆಹಚ್ಚಿ ಸರ್ಕಾರಿ ಆಸ್ಪತ್ರೆಯಲ್ಲಿ ಉಚಿತ ಚಿಕಿತ್ಸೆಯೊಂದಿಗೆ ಮಾತ್ರೆಗಳನ್ನು ನೀಡಿ ಸಮುದಾಯ ಆಧಾರಿತವಾಗಿ ಪೂನಾರ್ವಸತಿ ಗೊಳಿಸಲಾಗುತ್ತಿದೆ. ಆರೋಗ್ಯದಲ್ಲಿ ಸುಧಾರಣೆಯಾದ ಫಲನುಭವಿಗಳನ್ನು ಜೀವನೋಪಾಯ ಚಟುವಟಿಕಗಳ ಅಡಿಯಲ್ಲಿ ಸಾಲದ ರೂಪದಲ್ಲಿ ಹಣಕಾಸಿನ ಮತ್ತು ಕುರಿ, ಆಡು ವಿತರಿಸಲಾಗಿದೆ. ಗ್ರಾಮೀಣ ಪೂನರ್ವಸತಿ ಕಾರ್ಯಕರ್ತರು ಸಂಘ ಸಂಸ್ಥೆಗಳೊಂದಿಗೆ ಸೇರಿ ಮಾನಸಿಕ ಅಸ್ವಸ್ಥರನ್ನು ಸಮಾಜದ ಮುಖ್ಯ ವಾಹಿನಿಗೆ ತಂದು ಅವರಿಗೆ ಸಾಮಾಜಿಕ ಭದ್ರಾತ ಯೋಜನೆಗಳನ್ನು ಕೊಡಿಸಬೇಕು ಎಂದು ಹೇಳಿದರು.

## “ಜನಜಾಗೃತಿ ಕಾರ್ಯಕ್ರಮ ಸಮಾಜದಲ್ಲಿ ಒಳ್ಳೆ ಜೀವನ ಕಟ್ಟಿಕೊಳ್ಳಿ”



10 ಮೇ 2025. ರಂದು ಬೀದರ ತಾಲೂಕಿನ ಚಿಟ್ಟಾ ಗ್ರಾಮದಲ್ಲಿ ಎಲ್.ಎಲ್.ಎಲ್.ಎಫ್ ಕಾರ್ಯಕ್ರಮದ ಕಾರ್ಯಕರ್ತರಾದ ಅರುಣ ರವರು ಜನಜಾಗೃತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು. ಮಾನಸಿಕ ಅಸ್ವಸ್ಥತೆ ಎಂದರೇನು? ಮಾನಸಿಕ ಅಸ್ವಸ್ಥತೆಯ ಲಕ್ಷಣಗಳು. ಮಾನಸಿಕ ಕಾಯಿಲೆಗೆ ಒಳಗಾಗಿದ್ದ ವ್ಯಕ್ತಿಗಳನ್ನು ಯಾವ ರೀತಿಯಾಗಿ ಪತ್ತೆ ಹಚ್ಚಬೇಕು ಎಂಬುದಾಗಿ ತಿಳಿಸಲಾಯಿತು. ಇದು ಒಂದು ಮೆದುಳಿನ ಕಾಯಿಲೆಯಾಗಿದ್ದು, ಈ ಕಾಯಿಲೆಯವರು ಎಲ್ಲರಿಗೂ ಬರಬಹುದು ಈ ಕಾಯಿಲೆಯು ಬಂದಂತ ವ್ಯಕ್ತಿಗಳು ವಿಚಿತ್ರವಾಗಿ ವರ್ತಿಸುತ್ತಾರೆ. ತನ್ನಷ್ಟಕ್ಕೆ ತಾನು ಮಾತಾಡುವುದು, ನಿದ್ದೆ ಮಾಡುವುದು ವಿನಾಕಾರಣ ನಗುವುದು, ವಿನಾಕಾರಣ ಅಳುವುದು, ವಿನಾಕಾರಣ ಸಿಟ್ಟು ಮಾಡುವದು. ಮಾನಸಿಕ ಕಾಯಿಲೆಗೆ ಒಳಗಾಗಿದ್ದ ವ್ಯಕ್ತಿಗಳನ್ನು ಯಾವ ರೀತಿಯಾಗಿ ಪತ್ತೆಹಚ್ಚಬೇಕು ಎಂಬುದಾಗಿ ತಿಳಿಸಲಾಯಿತು. ಇಂತಹ ವ್ಯಕ್ತಿಗಳನ್ನು ಮತ್ತೆ ಸಮಾಜದಲ್ಲಿ ಬದುಕು ಕಟ್ಟಿಕೊಳ್ಳುವಂತೆ ಸಮಾಜ ಸೇವೆ ಮಾಡುತ್ತಿದೆ. ಇದರ ಮುಖ್ಯ ಉದ್ದೇಶವೇನಂದರೆ ಅವರು ಕೂಡ ಸಮಾಜದಲ್ಲಿ ಒಳ್ಳೆ ಜೀವನ ನಡೆಸಬೇಕೆಂಬುದೇ ಮುಖ್ಯ ಉದ್ದೇಶವಾಗಿದೆ. ಹೀಗೆ ಮಾನಸಿಕ ಹೊಂದಿರುವ ವ್ಯಕ್ತಿಯನ್ನು ಮೂಢನಂಬಿಕೆಗೆ ಬಲಿಯಾಗದೆ ಅವರಿಗೆ ಸರಿಯಾಗಿ ಚಿಕಿತ್ಸೆ ಕೊಡುವದರ ಮೂಲಕ ಅವರು ಸ್ವಲ್ಪವಾಗಿ ಬದಲಾವಣೆಯನ್ನು ಹೊಂದಬೇಕು ಈ ಕಾರ್ಯಕ್ರಮದಲ್ಲಿ ಒಟ್ಟು 10 ಜನರು ಭಾಗವಹಿಸಿದರು.

## “ಡಿ.ಎಮ್.ಎಚ್.ಪಿ ಶಿಬಿರದಲ್ಲಿ ಮನೋವೈದ್ಯರ ಉಚಿತ ತಪಾಸಣೆ ಮತ್ತು ಆಪ್ತಸಮಾಲೋಚನೆ”



15 ಮೇ 2025 ರಂದು ಔರಾದ್ ತಾಲೂಕಿನ ಬೆಲ್ಲುಣಿ ಗ್ರಾಮದಲ್ಲಿ ಆರ್ಬಿಟ್ ಸಂಸ್ಥೆ ಹಾಗೂ ನವಜೀವನ ಲೀವ್.ಲವ್.ಲಾಫ್ ಫೌಂಡೇಶನ್ ಸಂಯುಕ್ತ ಆಶ್ರಯದಲ್ಲಿ ಕಾರ್ಯಕರ್ತರಾಧಾ ಶ್ರೀ ಯೋಹಾನ ರವರು ಮಾನಸಿಕ ಆರೋಗ್ಯದ ಕುರಿತು ಜಾಗೃತಿ ನೀಡಲಾಯಿತು. ಆರೋಗ್ಯ ಎಂದರೇನು? ಮಾನಸಿಕ ಆರೋಗ್ಯ ಎಂದರೇನು? ಮಾನಸಿಕ ಕಾಯಿಲೆ ಒಂದು ಮನಸ್ಸಿನ ಮತ್ತು ಮೆದುಳಿನ ಕಾಯಿಲೆಯಾಗಿದೆ. ಮೂಢ ನಂಬಿಕೆಗೆ ಬಲಿಯಾಗದೆ ಸೂಕ್ತ ಚಿಕಿತ್ಸೆ ಪಡೆದುಕೊಳ್ಳಬೇಕು. ಸಮುದಾಯದಲ್ಲಿ ಮಾನಸಿಕ ಅಸ್ವಸ್ಥರನ್ನು ಗೌರವ, ಸ್ಥಾನ–ಮಾನದೊಂದಿಗೆ ಕಾಣಬೇಕು. ಮಾನಸಿಕ ಅಸ್ವಸ್ಥರು ಕಂಡುಬಂದಲ್ಲಿ ಹತ್ತಿರದ ಸರ್ಕಾರಿ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಸಂತಾಪುರದಲ್ಲಿ ಪ್ರತಿ ತಿಂಗಳ ಎರಡನೇ ಶುಕ್ರವಾರದಂದು ನಡೆಯುವ DMHP ಶಿಬಿರದಲ್ಲಿ ಮನೋವೈದ್ಯರು ಉಚಿತ ತಪಾಸಣೆ, ಆಪ್ತ ಸಮಾಲೋಚನೆ ಮತ್ತು ಮಾತ್ರೆಗಳನ್ನು ನೀಡುತ್ತಾರೆ. ಇದರ ಸದುಪಯೋಗ ಎಲ್ಲರೂ ಪಡೆದುಕೊಳ್ಳಬೇಕು ಎಂದು ತಿಳಿಸಿದರು. ಆರ್ಬಿಟ್ ಸಂಸ್ಥೆಯ ಮಾನಸಿಕ ಅಸ್ವಸ್ಥರ ಸಹಾಯವಾಣಿ ಸಂಖ್ಯೆ 9036664271 ಗೆ ಕರೆ ನೀಡಿ ಸಹಾಯ ಪಡೆಯಬೇಕು. ಆರೋಗ್ಯ ಇಲಾಖೆಯ ಶುಲ್ಕ ರಹಿತ ಸಹಾಯವಾಣಿ ಸಂಖ್ಯೆ 14416ಕೆ ಕರೆಮಾಡಿ ಉಚಿತ ಆಪ್ತಸಮಾಲೋಚನೆ ಪಡೆದುಕೊಳ್ಳಬೇಕು ಎಂದು ಹೇಳಿದರು.

## “ಮಮ್ತಾಜ ! ಮಾನಸಿಕ ಅಸ್ವಸ್ಥರ ಪಾಲನ ಪೋಷಕರ ಸಭೆ”




09 ಮೇ 2025 ರಂದು ಬೀದರ್ ತಾಲೂಕಿನ ಹಮಿಲಾಪುರ ಗ್ರಾಮದಲ್ಲಿ "ಮಮ್ತಾಜ" ಎಂಬ ಮಾನಸಿಕ ಅಸ್ವಸ್ಥರ ಸಭೆಯನ್ನು ಮಾಡಲಾಯಿತ್ತು. 5 ಜನ ಪಾಲಕ ಪೋಷಕರು ಇದ್ದು ಸಂಘದ ಸಭೆಯನ್ನು ನಡೆಸಲಾಯಿತು. ಈ ಸಭೆಯಲ್ಲಿ ಮಾನಸಿಕ ಅಸ್ವಸ್ಥರಿಗೆ ಮೊದಲು ಮಾತ್ರೆಗಳ ಬಗ್ಗೆ ಪರಿಶೀಲನೆ ಮಾಡಲಾಯಿತು. ಮತ್ತು ಸರ್ಕಾರದಿಂದ ದೊರೆಯುವ ಸೌಲಭ್ಯಗಳಾದ ಯು.ಡಿ.ಐ.ಡಿ ಕಾರ್ಡ್ ಮತ್ತು ಆರೋಗ್ಯ ವಿಮೆ ಯೋಜನೆ ಕಾರ್ಡ್ ಎಲ್ಲಾ ಸರ್ಕಾರದ ಸೌಲಭ್ಯಗಳ ಕುರಿತು ಫಲಾನುಭವಿಗಳಿಗೆ ತಿಳಿಸಲಾಯಿತು ಮತ್ತು ಸರಿಯಾಗಿ ಆರೈಕೆ ಮಾಡುವಂತೆ ಹೇಳಲಾಯಿತು. ಮಾತ್ರೆಗಳ ಸೇವನೆಯಿಂದ ತೊಂದರೆಯಾಗಿದೆ ಅಂದರೆ ಬೇಗ ತಿಳಿಸುವುದು ಎಂದು ಆರ್ಬಿಟ್ ಸಂಸ್ಥೆಯ ನವಜೀವನ ಎಲ್.ಎಲ್.ಎಲ್.ಎಫ್ ಕಾರ್ಯಕ್ರಮದ ಕಾರ್ಯಕರ್ತರಾದ ಶ್ರೀ ಅರುಣ ರವರು ಸಂಪೂರ್ಣವಾದ ಮಾಹಿತಿ ನೀಡಿದರು.

## “ಇದು ಒಂದು ಮೆದುಳಿನ ಕಾಯಿಲೆ ಮನೋವೈದ್ಯರಿಂದ ಸೂಕ್ತ ಸಲಹೆ”



05 ಮೇ 2025 ರಂದು ಔರಾದ್ ತಾಲೂಕಿನ ಜೋಜನಾ ಗ್ರಾಮದಲ್ಲಿ ಮಾನಸಿಕ ಆರೋಗ್ಯ ಕುರಿತು ಜಾಗೃತಿ ಕಾರ್ಯಕ್ರಮವನ್ನು ಆರ್ಬಿಟ್ ಸಂಸ್ಥೆಯ ನವಜೀವನ ಎಲ್.ಎಲ್.ಎಲ್.ಎಫ್ ಇವರ ಸಯುಕ್ತ ಆಶ್ರಯದಲ್ಲಿ ಹಮ್ಮಿಕೊಳ್ಳಲಾಯಿತು. ಈ ಕಾರ್ಯಕ್ರಮದ ಕಾರ್ಯಕರ್ತರಾದ ಶ್ರೀ ಸುಕ್ಕು ಅವರು ಜನಜಾಗೃತಿ ಕಾರ್ಯಕ್ರಮವನ್ನು ನಡೆಸಿದರು. ಮಾನಸಿಕ ಅಸ್ವಸ್ಥತೆ ಎಂದರೇನು? ಮಾನಸಿಕ ಅಸ್ವಸ್ಥತೆ ಲಕ್ಷಣಗಳು, ಮಾನಸಿಕ ಕಾಯಿಲೆಗೆ ಒಳಗಾಗಿದ ವ್ಯಕ್ತಿಗಳನ್ನು ಯಾವ ರೀತಿಯಾಗಿ ಪತ್ತೆ ಹಚ್ಚಬೇಕು ಎಂಬುದಾಗಿ ತಿಳಿಸಲಾಯಿತು. ಇದು ಒಂದು ಮೆದುಳಿನ ಕಾಯಿಲೆಯಾಗಿದ್ದು, ಈ ಕಾಯಿಲೆಯು ಎಲ್ಲರಿಗೂ ಬರಬಹುದು ಈ ಕಾಯಿಲೆಯು ಬಂದಂತ ವ್ಯಕ್ತಿಗಳ ನಡವಳಿಕೆ ವಿಚಿತ್ರವಾಗಿ ವರ್ತಿಸುತ್ತಾರೆ. ತನ್ನಷ್ಟಕ್ಕೆ ತಾನು ಮಾತಾಡುವುದು, ನಿದ್ದೆಮಾಡುವುದು, ವಿನಾಕಾರಣ ನಗುವುದು, ವಿನಾಕಾರಣ ಅಳುವುದು, ವಿನಾಕಾರಣ ಸಿಟ್ಟು ಮಾಡುವುದು ಎಂದು ತಿಳಿಸಲಾಯಿತು. ಇಂಥ ವ್ಯಕ್ತಿಗಳನ್ನು ಮತ್ತೆಹಚ್ಚಿ ಸಮಾಜದಲ್ಲಿ ಬದುಕು ಕಟ್ಟಿಕೊಳ್ಳುವಂತೆ ಸಹಾಯವನ್ನು ಮಾಡುತ್ತಿದ್ದೇವೆಎಣದು ತಿಳಿಸಿದರು.

## “ಗ್ರಾಮ ಪಂಚಾಯಿತಿನ ಅಧ್ಯಕ್ಷರು, ಪಿಡಿಒ, ಸದಸ್ಯರಿಗೆ ಜಾಗೃತಿ ಕಾರ್ಯಕ್ರಮ”

29 ಮೇ 2025 ರಂದು ಔರಾದ್ ತಾಲೂಕಿನ ಗ್ರಾಮ ಪಂಚಾಯಿತಿಯಲ್ಲಿ. ಗ್ರಾಮ ಪಂಚಾಯಿತಿನ ಅಧ್ಯಕ್ಷರು, ಪಿಡಿಒ, ಸದಸ್ಯರಿಗೆ ಸಭೆಯಲ್ಲಿ ಮಾನಸಿಕ ಅಸ್ವಸ್ಥರ ಮಾಹಿತಿಯನ್ನು ನೀಡಲಾಯಿತು. ಈ ಒಂದು ಸಭೆಯಲ್ಲಿ ಆರ್ಬಿಟ್ ಸಂಸ್ಥೆಯ ಕಾರ್ಯಕರ್ತರಾದ ಶ್ರೀ ಯೋಹಾನ ರವರು ತೆಗೆದುಕೊಂಡರು. ಈ ಸಭೆಯಲ್ಲಿ ಆರ್ಬಿಟ್ ಸಂಸ್ಥೆಯ ಪರಿಚಯ ಮತ್ತು ಮಾನಸಿಕ ಅಸ್ವಾಸ್ಥತೆ ಎಂದರೇನು? ಅವರ ಗುಣಲಕ್ಷಣಗಳ ಬಗ್ಗೆ ವಿವರವಾಗಿ ಮಾಹಿತಿಯನ್ನು ನೀಡಿದರು. ಈ ಒಂದು ಕಾರ್ಯಕ್ರಮದಲ್ಲಿ 12 ಜನ ಭಾಗವಹಿಸಿದ್ದರು.



## "ಪ್ರಾಥಮಿಕ ಆರೋಗ್ಯ ಕೇಂದ್ರ ಸಮ್ಮೇಳನ"



27 ಮೇ 2025 ರಂದು ಬೀದರ್ ತಾಲೂಕಿನ ನವಜೀವನ ಎಲ್.ಎಲ್.ಎಲ್.ಎಫ್ ಕಾರ್ಯಕ್ರಮದ ಕಾರ್ಯಕರ್ತರಾದ ಶ್ರೀ ಅರುಣ್ ಅವರು ಮನ್ನಳ್ಳಿ ಗ್ರಾಮದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರ ಸಮ್ಮೇಳನದಲ್ಲಿ ಮಾನಸಿಕ ಅಸ್ವಸ್ಥತೆಯ ಬಗ್ಗೆ ಜಾಗೃತಿ ಮೂಡಿಸಲಾಯಿತು. ಮಾನಸಿಕ ಅಸ್ವಸ್ಥತೆ ಎಂದರೇನು, ಅದರ ಲಕ್ಷಣಗಳು, ಮತ್ತು ಹೇಗೆ ಕಂಡುಹಿಡಿಯಬಹುದು ಎಂಬುದರ ಬಗ್ಗೆ ತಿಳಿಸಲಾಯಿತು. ಇದು ಒಂದು ಮೆದುಳಿನ ಕಾಯಿಲೆಯಾಗಿದೆ. ಸತತವಾಗಿ ಚಿಕಿತ್ಸೆಯು ತೆಗೆದುಕೊಳ್ಳುವುದು ತುಂಬಾ ಮುಖ್ಯವಾಗಿದೆ. ಕೇವಲ ಮಾತ್ರೆಗಳು ತೆಗೆದುಕೊಳ್ಳುವುದು ದಿನನಿತ್ಯ ಸೇವಿಸಿಕೊಳ್ಳುವುದು ಎಂದು ಚಿಕಿತ್ಸೆ ಬಗ್ಗೆ ಅರಿವು ಮೂಡಿಸಲಾಯಿತು. ಅಲ್ಲದೆ ಮಾಟ ಮಂತ್ರಾ ಎಂದು ಮೂಢನಂಬಿಕೆಗೆ ಬಲಿಯಾಗದೆ ಆರೋಗ್ಯದ ಕಡೆಗೆ ಗಮನಹರಿಸಿ ವೈದ್ಯರ ಸಲಹೆಗಳು ಕೇಳಿ ಗಮನಹರಿಸುವುದು ಉತ್ತಮ ಎಂದು ಹೇಳಲಾಯಿತು. ಈ ಒಂದು ಸಭೆಯಲ್ಲಿ 12 ಜನರು ಭಾಗವಹಿಸಿದ್ದರು.

## "ನೊಂದ ಜೀವಕ್ಕೆ ಬಾಳು ಕೊಟ್ಟ ಆರ್ಬಿಟ್"



ಬೀದರ್ ತಾಲೂಕಿನ ಮಳೆಗಾಂವ ಗ್ರಾಮದಲ್ಲಿ ಶ್ರೀಮತಿ ರೇಣುಕಾ ಅವರಿಗೆ ತನ್ನ ಗಂಡ ಬಿಟ್ಟು ಹೋದ ಕಾರಣ ಮಾನಸಿಕ ಕಾಯಿಲೆಗೆ ತುತ್ತಾಗಿದ್ದರು. ಆ ಸಂದರ್ಭದಲ್ಲಿ ನವಜೀವನ ಎಲ್.ಎಲ್.ಎಲ್.ಎಫ್ ಕಾರ್ಯಕ್ರಮದ ಕಾರ್ಯಕರ್ತರಾದ ಶ್ರೀ ಅರುಣ್ ರವರು ಮನೆ ಭೇಟಿ ನೀಡಿ ವಿಚಾರಿಸಿದಾಗ ಮನೇಲಿ ಜಗಳ ಮಾಡುವುದು, ಜನರ ಮೇಲೆ ಸಿಟ್ಟಾಗುವುದು, ಕೆಟ್ಟ ಶಬ್ದಗಳಿಂದ ಬೈಯುವುದು ಈ ತರಹದ ಲಕ್ಷಣಗಳು ಕಂಡು ಬರಲಾಯಿತು. ಆಗ ಚಿಕಿತ್ಸೆಯ ಬಗ್ಗೆ ಅರಿವು ಮೂಡಿಸಿ ಡಿ.ಎಮ್.ಎಚ್.ಪಿ ಕ್ಯಾಂಪ್ಗೆ ಕರೆತರೆದು ಸತತವಾಗಿ ಮಾತ್ರೆಗಳನ್ನು ಕೊಡಲಾಗಿದೆ. ಈಗ 80 ರಿಂದ 85% ಬದಲಾವಣೆ ಆಗಿದ್ದಾರೆ. ಈಗ ಅವರಿಗೆ ಮದುವೆಯೂ ಕೂಡ ಮಾಡಿದ್ದಾರೆ. ಇದರಿಂದ ರೇಣುಕಾಳ ಗಂಡ ಸಂತೋಷ ಮತ್ತು ರೇಣುಕಾಳ ಅಣ್ಣನಾದ ಮಹೇಶ್ ಅವರು ನಮ್ಮ ಆರ್ಬಿಟ್ ಸಂಸ್ಥೆಗೆ ಸಂತೋಷವಾಗಿ ಧನ್ಯವಾದಗಳು ತಿಳಿಸಿದ್ದಾರೆ.

# ಮಹಿಳಾ ಸಬಲೀಕರಣ ಕಾರ್ಯಕ್ರಮ"

## "ದಾಖಲಾತಿ ನಿರ್ವಹಣೆಗಳ ಕುರಿತು ತರಬೇತಿ"



10 ಮೇ 2025ರಂದು ಹುಮ್ನಾಬಾದ್ ತಾಲೂಕಿನ ದುಮ್ಮನಸೂರು ಗ್ರಾಮದಲ್ಲಿರುವ ಸಂಜನಾ ಮಹಾಸಂಗದ 26 ಮಹಿಳೆಯರಿಗೆ ಆರ್ಬಿಟ್ ಸಂಸ್ಥೆ ಮಹಿಳಾ ಸಬಲೀಕರಣ ಯೋಜನೆಯ ಕಾರ್ಯಕರ್ತರಾದ ಶ್ರೀಮತಿ ಸವಿತಾ ರವರು ದಾಖಲಾತಿ ನಿರ್ವಹಣೆಗಳ ಕುರಿತು ತರಬೇತಿಯನ್ನು ಹಮ್ಮಿಕೊಳ್ಳಲಾಗಿದ್ದು. ಸಂಘ ಮತ್ತು ಮಹಾ ಸಂಘಕ್ಕೆ ಬೇಕಾಗಿರುವ ಪ್ರತಿಯೊಂದು ಪುಸ್ತಕಗಳ ದಾಖಲೆಗಳನ್ನು ಕ್ರಮಬದ್ಧವಾಗಿಟ್ಟುಕೊಳ್ಳಬೇಕು. ಏಕೆಂದರೆ ಇದು ಪ್ರತಿಯೊಬ್ಬರ ಜವಾಬ್ದಾರಿಯಾಗಿರುತ್ತದೆ. ಅಧ್ಯಕ್ಷರು ಮತ್ತು ಕಾರ್ಯದರ್ಶಿಯವರ ಜವಾಬ್ದಾರಿಯ ಆಗಿರುತ್ತದೆ ಎಂದು ಸದಸ್ಯರು ನಿರ್ಲಕ್ಷ ಮಾಡಬಾರದು ಇದು ಪ್ರತಿಯೊಬ್ಬರಿಗೂ ಅನ್ವಯಿಸುವಂಥ ದಾಖಲೆಗಳಾಗಿರುತ್ತವೆ. ಏಕೆಂದರೆ ಬಡವರು ದಿನಗೂಲಿಯಲ್ಲಿ ಒಬ್ಬರಿಂದ ಒಬ್ಬರು ಸ್ವ ಸಹಾಯ ಮಾಡಿಕೊಳ್ಳುವಂತಹ ವಿವರಣೆಯನ್ನು ಒಳಗೊಂಡಿರುತ್ತದೆ. ಆದುದರಿಂದ ಸಂಘದ ಪ್ರತಿಯೊಂದು ಪುಸ್ತಕಗಳು ಹಾಗೂ ಬ್ಯಾಂಕ್ ಪುಸ್ತಕ ಇತ್ಯಾದಿ ವಿವರಣೆಯನ್ನು ಒಳಗೊಂಡಿರುವಂತಹ ಹಾಗೂ ಇತರ ಇಲಾಖೆಗಳಿಗೆ ಕೊಟ್ಟಿರುವಂತಹ ಅರ್ಜಿಗಳನ್ನು ಮಹಾಸಂಗದ ಮೂಲಕ ಮಾಡಿರುವ ಕಾರ್ಯಕ್ರಮದ ಫೋಟೋ ವರದಿಯನ್ನು ಅಚ್ಚುಕಟ್ಟಾಗಿ ನಿರ್ವಹಿಸುವುದರೊಂದಿಗೆ ಕ್ರಮಬದ್ಧವಾಗಿ ಇಟ್ಟುಕೊಳ್ಳುವ ಜವಾಬ್ದಾರಿಯನ್ನು ಸಂಘದಲ್ಲಿರುವ ಪ್ರತಿಯೊಬ್ಬ ಸದಸ್ಯರು ತೆಗೆದುಕೊಳ್ಳಬೇಕಾಗುತ್ತದೆ ಎಂದು ತಿಳಿಸಲಾಯಿತು.

## "ಕಾರ್ಮಿಕ ಬಂಧುಗ! ಕಾರ್ಮಿಕರ ದಿನಾಚರಣೆ"



24 ಮೇ 2025ರಂದು ರಾಜೇಶ್ವರ್ ಗ್ರಾಮದಲ್ಲಿ ಫಾತಿಮಾ ಸಂಘದ ಸದಸ್ಯರು ಹಾಗೂ ಸಮುದಾಯದ ಕಾರ್ಮಿಕ ಬಂಧುಗಳು ಸೇರಿ ಕೂಲಿ ಕಾರ್ಮಿಕರ ದಿನಾಚರಣೆ ಕುರಿತು ಸಿಸ್ಟರ್ ಕ್ರಿಸ್ಟಿನ ರವರು ಕೂಲಿ ಕಾರ್ಮಿಕರು ಅಂದರೆ ಬರೀ ಬಡವರು ನಿರ್ಗತಿಕರು ಮಾತ್ರ ಅಲ್ಲ ನಾವು ನೀವು ಎಲ್ಲರೂ ಕೂಲಿ ಕಾರ್ಮಿಕರೇ ಮನೆಯಿಂದ ಹೊರಗಡೆ ಬಂದು ಕೆಲಸ ಮಾಡುವ ಪ್ರತಿಯೊಬ್ಬರೂ ಕೂಲಿ ಕಾರ್ಮಿಕರೇ ಅವರ ಕೆಲಸಕ್ಕೆ ತಕ್ಕಂತೆ ಅವರಿಗೆ ಸಂಬಳ ಸಿಗಬೇಕು ಸಿಗದಿರುವ ಸಮಯದಲ್ಲಿ ಅದಕ್ಕೆ ನಾವು ಮುನ್ನುಗ್ಗಿ ಅದನ್ನು ಪಡೆದುಕೊಳ್ಳಬೇಕು ಎಂದು ತಿಳಿಸುತ್ತಾ ಕೂಲಿ ಕಾರ್ಮಿಕರ ದಿನಾಚರಣೆ ಕೇಕ್ ಕತ್ತರಿಸುವ ಮುಖಾಂತರ ಆಚರಿಸಲಾಯಿತು.

## "ತಾಯಿ ಎಂದರೆ ಮೊದಲ ಗುರು ತಾಯಿಯನ್ನು ಗೌರವಿಸುವುದು"



15 ಮೇ 2025ರಂದು ಚಿಟಗುಪ್ಪ ತಾಲೂಕಿನ ಮನ್ನಾಎಖೆಳಿ ಗ್ರಾಮದಲ್ಲಿ ಶ್ರೀಮತಿ ಅಮಿತಾ ಮಹಿಳಾ ಸಬಲೀಕರಣ ಯೋಜನೆಯ ಕಾರ್ಯಕರ್ತ ತಾಯಂದಿರ ದಿನಾಚರಣೆಯನ್ನು ಹಮ್ಮಿಕೊಂಡಿದ್ದರು. ಸಂಪನ್ಮೂಲ ವ್ಯಕ್ತಿಯಾಗಿ ಆಗಮಿಸಿರುವಂತಹ ಶ್ರೀ ಅರುಣ್ ನವಜೀವನ ಕಾರ್ಯಕ್ರಮದ ಕಾರ್ಯಕರ್ತರು ತಾಯಿ ಎಂದರೆ ಮೊದಲ ಗುರು ತಾಯಿಯನ್ನು ಗೌರವಿಸುವುದು, ಪೂಜಿಸುವುದು ನಮ್ಮ ಕರ್ತವ್ಯವಾಗಿದೆ. ಮಕ್ಕಳ ಲಾಲನೆ ಪಾಲನೆ ಮಾಡುವುದು ಹಾಗೂ ಅವರ ಒಳ್ಳೆಯ ಭವಿಷ್ಯವನ್ನು ರೂಪಿಸುವ ತಾಯಂದಿರಿಗೆ ಕೋಟಿ ನಮನಗಳನ್ನು ಸಲ್ಲಿಸುವುದು ನಮ್ಮೆಲ್ಲರ ಆದ್ಯ ಕರ್ತವ್ಯ ಎಂದು ತಿಳಿಸಿದರು. ಒಂದು ಹೆಣ್ಣು ತಾಯಿಯಾದಾಗ ಮಾತ್ರ ಅವಳ ಜೀವನ ಪರಿಪೂರ್ಣ ಹಾಗೂ ಸಾರ್ಥಕ ಎಂದು ಅವಳೇ ಭಾವಿಸುತ್ತಾಳೆ. ಇಡೀ ಕುಟುಂಬದ ಜವಾಬ್ದಾರಿಯನ್ನು ತೆಗೆದುಕೊಂಡು ಕುಟುಂಬವನ್ನು ಪ್ರಗತಿಪತದತ್ತ ಕೊಂಡೊಯ್ಯುವಂತಹ ಕೆಲಸ ಎಲ್ಲಾ ತಾಯಂದಿರದಾಗಿದೆ ಹಾಗಾಗಿ ನಿಮ್ಮೆಲ್ಲರಿಗೂ ಇವತ್ತಿನ ದಿನ ತಾಯಂದಿರ ದಿನದ ಶುಭಾಶಯಗಳು ಕೋರುತ್ತೇವೆ ಎಂದು ಶುಭ ಹಾರೈಸಿದರು. ಈ ಕಾರ್ಯಕ್ರಮದಲ್ಲಿ 20 ಮಹಿಳೆಯರು ಭಾಗವಹಿಸಿ ಕೇಕ್ ಕತ್ತರಿಸುವುದರ ಮೂಲಕ ಅವರ ದಿನವನ್ನು ಸಂತೋಷದಿಂದ ಆಚರಿಸಲಾಯಿತು.

## "ಸಂವಿಧಾನಿಕ ಹಕ್ಕುಗಳ ಕುರಿತು ತರಬೇತಿ"

05 ಮೇ 2025ರಂದು ಹುಮ್ನಾಬಾದ್ ತಾಲೂಕಿನ ಒಕ್ಲಿ ಗ್ರಾಮದಲ್ಲಿರುವ ಮೇರಿ ಮಹಾಸಂಘದ ಮಹಿಳೆಯರಿಗೆ ಆರ್ಬಿಟ್ ಸಂಸ್ಥೆ ಮಹಿಳಾ ಸಬಲೀಕರಣ ಯೋಜನೆಯ ಕಾರ್ಯಕರ್ತರಾದ ಶ್ರೀಮತಿ ಸವಿತಾ ರವರು ಆಯೋಜಿಸಿದ ಸಂವಿಧಾನಿಕ ಹಕ್ಕುಗಳ ಕುರಿತು ತರಬೇತಿಯನ್ನು ಹಮ್ಮಿಕೊಳ್ಳಲಾಗಿದ್ದು. ಮೇರಿ ಮಹಾಸಂಗದ ಸದಸ್ಯರಾದ ಶ್ರೀಮತಿ ಪೂಜಾ ರವರು ಸವಿಧಾನವು ಕೊಟ್ಟಿರುವ ಹಕ್ಕುಗಳನ್ನು ನಾವು ಸದ್ಬುಪಯೋಗ ಪಡಿಸಿಕೊಳ್ಳಬೇಕು. ಅವುಗಳೆಂದರೆ ಸಮಾನತೆಯ ಹಕ್ಕು, ಸ್ವಾತಂತ್ರ್ಯದ ಹಕ್ಕು, ಶೋಷಣೆಯ ವಿರುದ್ಧದ ಹಕ್ಕು, ಇವುಗಳನ್ನು ನಮ್ಮ ಜೀವನದಲ್ಲಿ ಆದರ್ಶವಾಗಿಟ್ಟುಕೊಂಡು ಧೈರ್ಯದಿಂದ ಜೀವಿಸಬೇಕು. ಶೋಷಣೆಯ ವಿರುದ್ಧ ಧ್ವನಿ ಎತ್ತಿ ನಿಲ್ಲುವ ಮಹಿಳೆಯರು ತಾವಾಗಬೇಕು ನಾಯಕತ್ವದ ಜವಾಬ್ದಾರಿಯನ್ನು ತೆಗೆದುಕೊಳ್ಳುವುದರೊಂದಿಗೆ ರಾಲಿ ಜಾತ ಹೋರಾಟ ಮಾಡಲು ಮುಂದಾಗಬೇಕು ಎಂದು ತಿಳಿಸುತ್ತಾ ಸಂವಿಧಾನಿಕ ಪ್ರಾಸ್ತಾವನೆ ನುಡಿಯನ್ನು ಎಲ್ಲರಿಗೂ ಕಲಿಸಲಾಯಿತು. ಇದರಲ್ಲಿ 26 ಮಹಿಳೆಯರು ಭಾಗವಹಿಸಿದ್ದರು.



## "ಕಾರ್ಮಿಕ ದಿನಾಚರಣೆಯ ಕಾರ್ಯಕ್ರಮ"

ಮೇ 14 2025ರಂದು ಹುಮ್ನಾಬಾದ್ ತಾಲೂಕಿನ ವಡ್ಡನ್ಕೇರಾ ಗ್ರಾಮದಲ್ಲಿ ಮಹಾಸಂಗ ಹಾಗೂ ನರೇಗಾ ಗುಂಪಿನ ಸದಸ್ಯರಿಗೆ ಶ್ರೀಮತಿ ಅಮಿತಾ ರವರು ಕಾರ್ಮಿಕ ದಿನಾಚರಣೆಯ ಕಾರ್ಯಕ್ರಮ ಹಮ್ಮಿಕೊಂಡಿದ್ದರು. ವಿಶ್ವ ಅಂತರಾಷ್ಟ್ರೀಯ ಕಾರ್ಮಿಕ ದಿನಾಚರಣೆಯ ಕೇಕ್ ಕತ್ತರಿಸುವ ಮೂಲಕ ಆಚರಣೆ ಮಾಡಲಾಯಿತು. ಸಂಘದ ಮಹಿಳಾ ಸದಸ್ಯರು ಹಾಗೂ ಕಲ್ಬುರ್ಗಿಯಿಂದ ಕ್ಷೇತ್ರ ವೀಕ್ಷಣೆಗೆ ಬಂದಿರುವಂತಹ ಸದಸ್ಯರು ಭಾಗವಹಿಸಿದರು. ಈ ಒಂದು ಕಾರ್ಯಕ್ರಮದಲ್ಲಿ ಅಂತರಾಷ್ಟ್ರೀಯ ಕಾರ್ಮಿಕ ದಿನಾಚರಣೆ ಕುರಿತು ಸಂಪನ್ಮೂಲ ವ್ಯಕ್ತಿಯಾಗಿ ಶ್ರೀ ಸೂರ್ಯಕಾಂತ್ ರವರು ಮಾಹಿತಿಯನ್ನು ನೀಡಿದರು. 1 ಮೇ 1886 ಅಮೇರಿಕ ದೇಶದ ಚಿಕಾಗೋ ಪ್ರದೇಶದಲ್ಲಿ ಮೊಟ್ಟಮೊದಲ ಬಾರಿಗೆ ವಿಶ್ವದ ಎಲ್ಲಾ ಕಾರ್ಮಿಕರು ಭಾಗವಹಿಸಿ ಉಗ್ರವಾಗಿರುವಂತಹ ಹೋರಾಟವನ್ನು ಮಾಡುತ್ತ ಕಾರ್ಮಿಕ ದಿನಾಚರಣೆಯನ್ನು ಆಚರಣೆ ಮಾಡಲು ಅಡಿಗಲ್ಲು ಹಾಕಿದರು. ಮೂಲ ಉದ್ದೇಶವೇನೆಂದರೆ 1886ಕ್ಕಿಂತ ಮುಂಚೆ ಕಾರ್ಮಿಕರು 15 ಗಂಟೆ ದುಡಿಯಬೇಕಾಗಿತ್ತು. ನಿಗದಿತ ಸಮಯ ಮತ್ತು ನಿಗದಿತವಾಗಿರುವಂತಹ ಕೂಲಿ ಅವರಿಗೆ ದೊರೆಯುತ್ತಿರಲಿಲ್ಲ. ಆದ್ದರಿಂದ ಉಗ್ರವಾದ ಹೋರಾಟದ ಪರಿಣಾಮವಾಗಿ ಅವರಿಗೆ ವಿಜಯವನ್ನು ಲಭಿಸಿತು. ಅಂದಿನಿಂದ ಇಂದಿನವರೆಗೆ ಸತತವಾಗಿ ವಿಶ್ವ ಕಾರ್ಮಿಕರ ದಿನಾಚರಣೆ ಆಚರಣೆ ಮಾಡುತ್ತಿದ್ದಾರೆ ಎಂದು ಮಾಹಿತಿಯನ್ನು ತಿಳಿಸಿದರು.





## “ಲಿಂಗ ಸಮಾನತೆ ಮತ್ತು ನ್ಯಾಯದ ಕುರಿತು ಕಾರ್ಯಕ್ರಮ”



15 ಮೇ 2025ರಂದು ಭಾಲ್ಕಿ ತಾಲೂಕಿನ ಹುಣಜಿ (ಕೆ) ಗ್ರಾಮದಲ್ಲಿ ಇರುವಂತಹ ಆತ್ಮ ಜ್ಯೋತಿ ಸಂಘದ ಸದಸ್ಯರಿಗೆ ಲಿಂಗ ಸಮಾನತೆ ಮತ್ತು ನ್ಯಾಯದ ಕುರಿತು ಸಂಪನ್ಮೂಲ ವ್ಯಕ್ತಿಯಾಗಿ ಆಗಮಿಸಿದ ಮಹಿಳಾ ಸಬಲೀಕರಣ ಯೋಜನೆಯ ಸಂಯೋಜಕರಾದ ಶ್ರೀಮತಿ ನಿರ್ಮಲರವರು ತರಬೇತಿಯನ್ನು ನೀಡುತ್ತಾ, ಲಿಂಗ ಹಾಗೂ ಲಿಂಗತ್ವಕ್ಕಿರುವ ವ್ಯತ್ಯಾಸವನ್ನು ತಿಳಿಸಿದರು. ಹಿಂದಿನ ಸಮಾಜದಲ್ಲಿ ನಾವು ಹೆಣ್ಣು ಗಂಡು ಬೇಧವಿಲ್ಲದೆ ಸರಿಸಮಾನವಾಗಿ ಮೊದಲು ನಮ್ಮ ಕುಟುಂಬದಿಂದ ಅದನ್ನು ನಾವು ತೆಗೆದು ಹಾಕಬೇಕು ಹಾಗೂ ಅದೇ ರೀತಿಯಲ್ಲಿ ನಾವು ಸಮಾಜದಲ್ಲಿ ಈ ಒಂದು ಸಮಾನತೆಯನ್ನು ತರಲು ಸಾಧ್ಯವೆಂದು ತಿಳಿಸಿದರು. ಇಂದಿನ ಸಮಾಜದಲ್ಲಿ ಪ್ರತಿಯೊಂದು ಕ್ಷೇತ್ರಗಳಲ್ಲಿ ಮುಂದೆಬಂದು ಕಾರ್ಯನಿರ್ವಹಿಸುತ್ತಿರುವುದು ನಾವೆಲ್ಲರೂ ಕಾಣುವಂತವರಾಗಿದ್ದೇವೆ. ಹಾಗಾಗಿ ನಾವು ಗಂಡು-ಹೆಣ್ಣು ಎಂಬ ಭೇದಭಾವ ಮಾಡದೆ ಇಬ್ಬರನ್ನು ಸಮಾನತೆ ತರುವಂತ ಕೆಲಸ ನಮ್ಮೆಲ್ಲರ ಹೊಣೆಯಾಗಿದೆ ಎಂದು ತರಬೇತಿ ನೀಡಿದರು. ಈ ತರಬೇತಿಯಲ್ಲಿ ಒಟ್ಟು 15 ಜನ ಸದಸ್ಯರು ಭಾಗವಹಿಸಿದ್ದರು.

## “ತಾಯಿ ಎಂದರೆ ಸ್ಫೂರ್ತಿ, ಸೌಂದರ್ಯದ ಗಣಿ! ದೇವರ ಕೊಟ್ಟ ಒಂದು ವರವಾಗಿದೆ”



16 ಮೇ 2025ರಂದು ಮೋರಂಬಿ ಗ್ರಾಮದಲ್ಲಿ ರಾಮಬಾಯಿ ಸಂಘದ ಸದಸ್ಯರೊಂದಿಗೆ ಮಹಿಳಾ ಸಬಲೀಕರಣ ಯೋಜನೆಯ ಕಾರ್ಯಕರ್ತೆಯಾದ ಶ್ರೀಮತಿ ಸುಜಾತ ರವರು ತಾಯಂದಿರ ದಿನಾಚರಣೆಯನ್ನು ಆಚರಣೆ ಮಾಡಲಾಯಿತು ತಾಯಿ ಎಂದರೆ ಸ್ಫೂರ್ತಿ, ತಾಯಿ ಎಂದರೆ ಸೌಂದರ್ಯದ ಗಣಿ ತಾಯಿ ಎಂದರೆ ಸಹನಾಮೂರ್ತಿ ಇದೇ ತರಹ ತಾಯಿ ಎಂದರೆ ಒಂದು ಶ್ರೇಷ್ಠವಾದ ಪದ. ತಾಯ್ತನದ ಭಾಗ್ಯವನ್ನು ಪ್ರತಿಯೊಬ್ಬರಿಗೂ ಸಿಗೋದಿಲ್ಲ ತಾಯಿ ಎಂಬುದು ಒಂದು ಸೌಭಾಗ್ಯ. ತಾಯಿತನವನ್ನು ಪಡೆಯುವುದೇ ಒಂದು ಅದೃಷ್ಟ ತಾಯ್ತನವನ್ನು ದೇವರ ಕೊಟ್ಟ ಒಂದು ವರವಾಗಿದೆ ಹೀಗೆ ನಾವು ಪ್ರತಿ ವರ್ಷದಂತೆ ಈ ವರ್ಷವೂ ಕೂಡ ತಾಯಂದಿರ ದಿನಾಚರಣೆ ಆಚರಣೆ ಮಾಡೋಣ ಎಂದು ತಿಳಿಸುತ್ತಾ ಸಂಘದ ಸದಸ್ಯರೊಂದಿಗೆ ತಾಯಂದಿಯರ ದಿನಾಚರಣೆ ಕೇಕ್ ಕಟ್ ಮಾಡುವುದರ ಮೂಲಕ ತಾಯಂದಿರ ದಿನಾಚರಣೆ ಆಚರಣೆ ಮಾಡಲಾಯಿತು.

# ಸೇವಾ ಸಂಗಮ ಸಂಸ್ಥೆ, ಕಲಬುರಗಿ

## “ಶ್ರೀ ಜಗದ್ಗುರು ಶಿವಲಿಂಗೇಶ್ವರ ಜಾತ್ರಾ” “ಟೆಂಟ್ ಅರಿವಿನ ಕಾರ್ಯಕ್ರಮ”



ಮೇ 13 ರಂದು ಸೇವಾಸಂಗಮ ಸಂಸ್ಥೆ ಮತ್ತು ಅಜೀಂ ಪ್ರೇಮಜೀ ಫೌಂಡೇಶನ್ ಸಂಯೋಗದಲ್ಲಿ ಕಲ್ಬುರ್ಗಿ ತಾಲೂಕಿನ ಮೇಳಕುಂದ ಗ್ರಾಮದಲ್ಲಿ ಶ್ರೀ ಜಗದ್ಗುರು ಶಿವಲಿಂಗೇಶ್ವರ ಜಾತ್ರಾ ಮಹೋತ್ಸವದಲ್ಲಿ ಶೀಘ್ರ ಪತ್ತೆಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಕುರಿತು ಟೆಂಟ್ ಅವರ್ನೆಸ್ ಕಾರ್ಯಕ್ರಮವನ್ನು ಆಯೋಜಿಸಲಾಯಿತು. 0-6 ವರ್ಷದೊಳಗಿನ ಮಗುವಿನಲ್ಲಿ ಮೂರುತಿಂಗಳಿಗೆ ಕತ್ತು ನಿಲ್ಲದಿರುವುದು, ಆರುತಿಂಗಳಿಗೆ ಹೊರಳಾಡುವುದು, ಕುಳಿತುಕೊಳ್ಳಬೇಕು. ಒಂದು ವರ್ಷದಲ್ಲಿ ಮಗು ಸ್ವತಂತ್ರವಾಗಿ ನಡೆಯಬೇಕು ಅಥವಾ ಸಹಾಯದ ಮೂಲಕ ನಡೆಯಬೇಕು. ಈ ಎಲ್ಲಾ ಚಟುವಟಿಕೆಗಳು ಮಕ್ಕಳು ಮಾಡದಿದ್ದರೆ ಮಗು ಬೆಳವಣಿಗೆಯಲ್ಲಿ ಕುಂಟಿತ ಹೊಂದಿದೆ ಎಂದು ತಿಳಿದುಬರುತ್ತದೆ. ಈ ಮೇಲಿನ ಎಲ್ಲಾ ಲಕ್ಷಣಗಳು ಕಂಡುಬಂದರೆ ಕರಪತ್ರದ ಮೇಲೆ ಇರುವ ನಂಬರಿಗೆ ಫೋನ್‌ಕಾಲ್ ಮಾಡಿ ತಿಳಿಸಿರಿ ಎಂದು ಕರಪತ್ರ ನೀಡುವುದರ ಮೂಲಕ ಕುಮಾರಿ ಲಕ್ಷ್ಮಿ ಅವರು ಒಟ್ಟು 50 ಜನ ಗ್ರಾಮಸ್ಥರಿಗೆ ಅರಿವು ಮೂಡಿಸಿದರು.

## “ಬೆಳವಣಿಗೆಯಲ್ಲಿ ಕುಂಟಿತ ಮಕ್ಕಳಿಗೆ ಎತ್ತರ ಮತ್ತು ತೂಕ ಮಾಪನ”



7 ಮೇ 2025ರಂದು ಸೇವಾಸಂಗಮ ಸಂಸ್ಥೆ ಮತ್ತು ಅಜೀಂ ಪ್ರೇಮಜೀ ಫೌಂಡೇಶನ್ ಸಂಯೋಗದಲ್ಲಿ ಕಲ್ಬುರ್ಗಿ ತಾಲೂಕಿನ ಸಾವಳಗಿ ಗ್ರಾಮದ ಕೂಸಿನ ಮನೆಯಲ್ಲಿ ಬೇಬಿ ಸ್ಕ್ರೀನಿಂಗ ಹಮ್ಮಿಕೊಳ್ಳಲಾಯಿತು. ಬೆಳವಣಿಗೆಯಲ್ಲಿ ಕುಂಟಿತ ಹೊಂದಿರುವ ಮಕ್ಕಳಿಗೆ ಎತ್ತರ ಮತ್ತು ತೂಕ ಮಾಪನ ಮಾಡುವುದರ ಮೂಲಕ ಮಕ್ಕಳಿಗೆ ನ್ಯೂನ್ಯತೆ ಹೊಂದಿದೆ ಎಂಬುದನ್ನು ಕಂಡು ಹಿಡಿಯುವುದು. ಕುಮಾರಿ ಲಕ್ಷ್ಮಿ ಅವರು ಮಾಪನ ಮಾಡಿದರು. ಇದರಲ್ಲಿ ಒಟ್ಟು 13 ಜನ ಮಕ್ಕಳಿಗೆ ಮಾಪನ ಮಾಡಲಾಯಿತು.

## “ಅಂಗನವಾಡಿ ಕೇಂದ್ರದಲ್ಲಿ ಪೌಷ್ಟಿಕ ಆಹಾರದ ಕುರಿತು ಜಾಗೃತಿ ಕಾರ್ಯಕ್ರಮ”



22 ಮೇ 2025ರಂದು ಕಲ್ಬುರ್ಗಿ ಜಿಲ್ಲೆಯಲ್ಲಿ ಬರುವ ಶ್ರೀ ನಿವಾಸ್ಸರಡಗಿ ಅಂಗನವಾಡಿ ಕೇಂದ್ರದಲ್ಲಿ ಸ್ಥಳೀಯ ಮಹಿಳೆಯರಿಗೆ ಪೌಷ್ಟಿಕ ಆಹಾರದ ಕುರಿತು ಜಾಗೃತಿ ಕಾರ್ಯಕ್ರಮ ಮಾಡಲಾಯಿತು. ಈ ಒಂದು ಕಾರ್ಯಕ್ರಮದಲ್ಲಿ ಗರ್ಭಿಣಿ ಮಹಿಳೆಯರು ಯಾವರೀತಿ ಆಹಾರ ಸೇರಿಸಬೇಕೆಂದು ಹೇಳಲಾಯಿತು. ಹೆಚ್ಚು ಹೆಚ್ಚು ಹಸಿ ತರಕಾರಿಗಳು ಹಣ್ಣುಗಳು ವಿಟಮಿನ್ ಹೊಂದಿರುವಂತ ಹಣ್ಣುಗಳು, ಮೊಳಕೆ ಕಾಳುಗಳು, ಕ್ಯಾಲ್ಸಿಯಂ ಪದಾರ್ಥಗಳು ಗರ್ಭಿಣಿ ಮಹಿಳೆಯರು ಸೇವಿಸಬೇಕು. ನಾವು ಎಷ್ಟು ಪೌಷ್ಟಿಕ ಆಹಾರ ಸೇವಿಸುತ್ತೇವೆಯೋ ಅಷ್ಟು ನಮ್ಮ ಆರೋಗ್ಯ ಸ್ಥಿತಿಯು ಉತ್ತಮವಾಗಿ ಇರುತ್ತದೆ. ಎಲ್ಲಾ ಸ್ಥಳೀಯ ಮಹಿಳೆಯರು ಮತ್ತು ಗರ್ಭಿಣಿಯರು ಉತ್ತಮವಾದ ಆಹಾರ ಪದ್ಧತಿಯನ್ನು ಅಳವಡಿಸಿಕೊಳ್ಳಿ ಎಂದು ಸೇವಾಸಂಗಮ ಸಂಸ್ಥೆಯ ಕಾರ್ಯಕರ್ತರಾದ ಶ್ರೀಮತಿ ದಾಕ್ಷಾಯಿಣಿಯವರು ಮಾಹಿತಿ ನೀಡಿದರು. ಈ ಒಂದು ಕಾರ್ಯಕ್ರಮದಲ್ಲಿ 10 ಜನ ಭಾಗವಿಸಿದರು.

## “ಮಕ್ಕಳಿಗೆ ದೈಹಿಕ ಮಾಪನ ಮತ್ತು ಸಾಧನ ಸಲಕರಣೆಗಳ ಮೌಲ್ಯಮಾಪನ”



19 ಮೇ 2025ರಂದು ಸೇವಾಸಂಗಮ ಸಂಸ್ಥೆ ಮತ್ತು ಸಾಖ್ಯಾ ಸಂಸ್ಥೆ ಸಂಯೋಗದಲ್ಲಿ Ricebioncks ಅವರ ಅಡಿಯಲ್ಲಿ 36 ಮಕ್ಕಳಿಗೆ ದೈಹಿಕ ಮಾಪನಮಾಡಿ, ಅವರಿಗೆ ಅನುಕೂಲವಾಗುವ ರೀತಿಯಲ್ಲಿ ಸಾಧನ ಸಲಕರಣೆಗಳ ಮೌಲ್ಯಮಾಪನ ಮಾಡಲಾಯಿತು. ಈ ಸಂದರ್ಭದಲ್ಲಿ Dr. ManishaSamal, clinical prosthetist and orthotist. Dr. RimpleLora, clinical prosthetist and orthotist. Basayya Hiremath, senior p & o technician. Jayakrishnan, creative and media specialist. ಸಾಕ್ಯಾ ಸಂಸ್ಥೆಯ ಭೌತಿಕ ತಜ್ಞರು, ಉಪಸ್ಥಿತರಿದ್ದರು. ಸಂಸ್ಥೆಯ ನಿರ್ದೇಶಕರಾದ ಫಾದರ್ ವಿಕ್ಟರ್ ವಾಸ್ ಈ ಸಂದರ್ಭದಲ್ಲಿ ಮಾತನಾಡಿ ಈ ಸಂಸ್ಥೆಯ ಮೂಲಕ ನಮಗೆ ಈ ಭಾಗದ ಬೆಳವಣಿಗೆಯಲ್ಲಿ ಇರುವ ಕುಂಠಿತ ಮಕ್ಕಳಿಗೆ ಸಾಧನ ಸಲಕರಣೆಗಳ ನೀಡುವುದರ ಮೂಲಕ ಮಕ್ಕಳ ಬದಲಾವಣೆ ನಿಟ್ಟಿನಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಇದರ ಸದೋಪಯೋಗವನ್ನು ಪೋಷಕರು ಪಡೆದುಕೊಳ್ಳಿ ಎಂದು ಹೇಳಿದರು. ಈ ಕಾರ್ಯಕ್ರಮದಲ್ಲಿ ಶೀಘ್ರ ಪತ್ತೆಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಯೋಜನೆಯ ವ್ಯವಸ್ಥಾಪಕರು ಮತ್ತು ಸಿಬ್ಬಂದಿ ವರ್ಗದವರು ಭಾಗವಹಿಸಿದ್ದರು.




## “ವಿಕಲ ಚೇತನ ಮಕ್ಕಳ ಪಾಲಕರ ಸಭೆ”



21 ಮೇ 2025ರಂದು ಸೇವಾಸಂಗಮ ಸಂಸ್ಥೆ ಮತ್ತು ಅಜೀಂ ಪ್ರೇಮಜೀಯವರ ಸಂಯೋಗದಲ್ಲಿ ಶೀಘ್ರ ಪತ್ತೆಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣದ ಯೋಜನೆಯ ಅಡಿಯಲ್ಲಿ ಕಲ್ಬುರ್ಗಿ ನಗರ ಪ್ರದೇಶದ ಚೇತನ ಪಾಲಕರ ಸಭೆಯನ್ನು ಮಾಡಲಾಯಿತು. ಈ ಸಭೆಯಲ್ಲಿ ವಿಕಲ ಚೇತನ ಮಕ್ಕಳಿಗೆ ಸರಕಾರದಿಂದ ಸಿಗುವ ಸೌಲಭ್ಯಗಳು ಕುರಿತು ಮತ್ತು ಮಕ್ಕಳ ಶಿಕ್ಷಣ ಕುರಿತು 2016ರ ವಿಕಲಚೇತನ ಮಕ್ಕಳಿಗೆ ಶಿಕ್ಷಣದ ಸೌಲಭ್ಯಗಳ ಕುರಿತು ಅವುಗಳನ್ನು ನಾವು ಯಾವರೀತಿ ಪಾಲಕರ ಒಗ್ಗಟ್ಟಿನ ಮೂಲಕ ಸೌಲಭ್ಯಗಳನ್ನು ಪಡೆದುಕೊಳ್ಳಬಹುದು. ಎನ್ನುವುದರ ಕುರಿತು ಚರ್ಚೆಮಾಡಲಾಯಿತು. ಈ ಸಭೆಯಲ್ಲಿ ಯೋಜನೆಯ ವ್ಯವಸ್ಥಾಪಕರಾದ ಶ್ರೀಮತಿ ಶ್ವೇತಾ, ಕಾರ್ಯಕರ್ತರ ಶ್ರೀಮತಿ ಶಿವಕಾಂತಿ ಸಿಸ್ಟರ್ ಶೈಲಜಾ, ಕುಮಾರಿ ಅನಿತಾ, ಶ್ರೀಮತಿ ವಿಜಯಲಕ್ಷ್ಮಿ ಉಪಸ್ಥಿತರಿದ್ದರು 13 ಜನ ಪಾಲಕರು ಭಾಗವಹಿಸಿದರು.

## “ಶೀಘ್ರ ಪತ್ತೆಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಕುರಿತು ಕಾರ್ಯಕ್ರಮ”



21 ಮೇ 2025ರಂದು ಸಂಜೀವನಗರ ಏರಿಯಾದಲ್ಲಿ ಸೇವಾಸಂಗಮ ಸಂಸ್ಥೆ ಹಾಗೂ ಅಜೀಂ ಪ್ರೇಮಜೀ ಫೌಂಡೇಶನ್ ಸಹಯೋಗದೊಂದಿಗೆ ಶೀಘ್ರ ಪತ್ತೆಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಕುರಿತು ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು. ಈ ಕಾರ್ಯಕ್ರಮದಲ್ಲಿ ಜನರಿಗೆ ಹುಟ್ಟಿನಿಂದ 6 ವರ್ಷದ ಒಳಗೆ ಇರುವ ಬೆಳವಣಿಗೆಯಲ್ಲಿ ಕುಂಟಿತವಿರುವ ಮಕ್ಕಳನ್ನು ಗುರುತಿಸಿ, ಆ ಮಕ್ಕಳ ನ್ಯೂನ್ಯತೆ ತಕ್ಕಂತೆ ವಿವಿಧ ಚಟುವಟಿಕೆಗಳ ಮೂಲಕ ಮಕ್ಕಳಲ್ಲಿ ಬದಲಾವಣೆ ತರುವುದೇ ಈ ಕಾರ್ಯಕ್ರಮದ ಉದ್ದೇಶವಾಗಿದೆ ಎಂದು ಶ್ರೀಮತಿ ವಿಜಯಲಕ್ಷ್ಮಿ ಅವರು ತಿಳಿಸಿದರು. ಇದರಲ್ಲಿ ಒಟ್ಟು 15 ಜನ ಸದಸ್ಯರು ಹಾಗೂ ಕಿಶೋರಿಯರು ಭಾಗವಹಿಸಿದ್ದರು.

# ORBIT NGO

Non-Governmental Organization
Humnabad, Karnataka

Organization of Bidar Integral Transformation

## Scan this QR Code

# TO DONATE

www.orbitbidar.in

SEVA SANGAMA
INCLUDING THE EXCLUDED

# SEVA SANGAMA

Organization for Social Concern Development

## Scan this QR Code

## TO DONATE

www.sevasangama.in

# ಸೇವಾ ಸಂಗಮ ಮತ್ತು ಆರ್ಬಿಟ್ ಸಂಸ್ಥೆ (NGO)
# ಗುಲ್ಬರ್ಗಾ ಧರ್ಮಕ್ಷೇತ್ರ

## Appeal

ಗುಲ್ಬರ್ಗಾ ಧರ್ಮ ಕ್ಷೇತ್ರವು ಉತ್ತರ ಕರ್ನಾಟಕದ ಹಿಂದುಳಿದ ಜಿಲ್ಲೆಗಳಾದ ಬೀದರ್, ಬಿಜಾಪುರ್, ಯಾದಗಿರಿ ಹಾಗೂ ಗುಲ್ಬರ್ಗಾ ಜಿಲ್ಲೆಗಳನ್ನು ಒಳಗೊಂಡಿದೆ. ಗುಲ್ಬರ್ಗಾ ಧರ್ಮಕ್ಷೇತ್ರವು ಉಗಮ ಆಗುವುದಕ್ಕಿಂತ ಮುಂಚೆ ಮಂಗಳೂರು ಧರ್ಮಕ್ಷೇತ್ರದಿಂದ ಗುರುಗಳು ಹಾಗೂ ಕನ್ಯಾ ಭಗಿನಿಯರು ಬೀದರ್ ಜಿಲ್ಲೆಯ ಸರ್ವತೋಮುಖ ಬೆಳವಣಿಗೆಗಾಗಿ ಶ್ರಮಿಸಿದ್ದಾರೆ. ಆರ್ಬಿಟ್ ಸಮಾಜ ಸೇವಾ ಸಂಸ್ಥೆಯ ಮುಖಾಂತರ 1993 ರಿಂದ ಆರೋಗ್ಯ, ಶಿಕ್ಷಣ, ಮಹಿಳಾ ಸಬಲೀಕರಣ, ಅಂಗವಿಕಲರ ಸಬಲೀಕರಣ ಹಾಗೂ ನಿರ್ಗತಿಕರಿಗೆ ಆಸರೆ ಒದಗಿಸುವ ಕೆಲಸವನ್ನು ಮಾಡಿದ್ದಾರೆ. ಹಾಗೆ 2005ನೇ ಇಸವಿಯಲ್ಲಿ ಗುಲ್ಬರ್ಗಾ ಧರ್ಮಕ್ಷೇತ್ರ ಉಗಮವಾದಾಗಿನಿಂದ ಈ ಸಮಾಜ ಸೇವಾ ಕೆಲಸವನ್ನು ನಾಲ್ಕು ಜಿಲ್ಲೆಗಳಲ್ಲಿ ಕೈಗೊಳ್ಳಲಾಯಿತು. ಸೇವಾ ಸಂಗಮ ಹಾಗೂ ಆರ್ಬಿಟ್ ಸಂಸ್ಥೆಗಳ ಮುಖಾಂತರ ಮಹಿಳಾ ಸಬಲೀಕರಣ, ಮಕ್ಕಳ ಶಿಕ್ಷಣ, ಅಂಗವಿಕಲರ ಕಾರ್ಯಕ್ರಮ, ಪರಿಸರ ಸಂರಕ್ಷಣೆ, ನಿರುದ್ಯೋಗಿಗಳಿಗೆ ಕೌಶಲ್ಯ ತರಬೇತಿ, ಮಾನಸಿಕ ಅಸ್ವಸ್ಥರಿಗೆ ಪುನರ್ವಸತಿ, ಎಂಟು ವರ್ಷಕ್ಕಿಂತ ಕೆಳಗಿನ ಬೆಳವಣಿಗೆಯಲ್ಲಿ ಕುಂಠಿತ ಹೊಂದಿದ ಮಕ್ಕಳಿಗೆ ಚಿಕಿತ್ಸೆ, ನೈಸರ್ಗಿಕ ವಿಪತ್ತು ನಿವಾರಣೆ, ಕ್ಯಾನ್ಸರ್ ಜಾಗೃತಿ ಆಂದೋಲನ, ಹೀಗೆ ಸಮಾಜದಿಂದ ಹಂಚಿಕೆ ತಳ್ಳಲ್ಪಟ್ಟ ಜನರಿಗೆ ಪುರ್ನವಸತಿ ನೀಡುವ ಕೆಲಸವನ್ನು ಈ ಎರಡು ಸಂಸ್ಥೆಗಳು ಮಾಡುತ್ತಿವೆ. ಹಲವಾರು ಕಾರ್ಯಕ್ರಮಗಳ ಮುಖಾಂತರ ನಮ್ಮ ಎರಡು ಸಂಸ್ಥೆಗಳು ಬಡವರಿಗೆ, ನಿರ್ಗತಿಕರಿಗೆ, ಶೋಷಿತರಿಗೆ, ಹಾಗೂ ವಿವಿಧ ಶೋಷಣೆಗಳಿಗೆ ಒಳಗಾದ ಜನರಿಗೆ ಸ್ಫೂರ್ತಿ, ಶಕ್ತಿ, ಹಾಗೂ ಜೀವವನ್ನು ತುಂಬುತ್ತವೆ. ಈ ಸೇವೆಗಳನ್ನು ಹೆಚ್ಚು ಜನರಿಗೆ ತಲುಪಿಸಲು, ನಿಮ್ಮ ಸಹಾಯ ಹಸ್ತವನ್ನು ಹಾಗೂ ನಮ್ಮೊಂದಿಗೆ ಸೇರಿ ಸುಂದರ ಸಮಾಜವನ್ನು ಕಟ್ಟಲು ನಿಮ್ಮ ನೆರವನ್ನು ಅಪೇಕ್ಷಿಸುತ್ತೇವೆ.

ಬನ್ನಿ ಉತ್ತಮ ಸಮಾಜವನ್ನು ಕಟ್ಟೋಣ.




**TO DONATE, SCAN THE QR CODE**

ನಿಮ್ಮ ಸಹಾಯದಿಂದ ಗುಲ್ಬರ್ಗಾ ಹಾಗೂ ಬೀದರ, ಕೋಳಗೇರಿ ನಿವಾಸ ಮಕ್ಕಳು ಉತ್ತಮ ಶಿಕ್ಷಣ ಪಡೆಯುತ್ತಾರೆ.

ಪ್ರಾಯೋಜಕರು ಒಂದು ಟ್ಯೂಷನ್ ಸೇಂಟರ್ ಪ್ರತಿ ತಿಂಗಳು 4000/- ವರ್ಷಕ್ಕೆ 40,000/-

ನಿಮ್ಮ ಸಹಾಯದಿಂದ ವಿಶೇಷ ಚೇತನ ಮಕ್ಕಳು ತಮ್ಮ ಸಾಮರ್ಥ್ಯ ಹಾಗೂ ಕೌಶಲ್ಯಗಳು ಕಂಡುಕೊಳ್ಳುತ್ತಾರೆ.

ಪ್ರಾಯೋಜಕರು ಒಂದು ಮಗು ರೂ.500 ಪ್ರತಿ ತಿಂಗಳು / ವರ್ಷಕ್ಕೆ 6000/-

ನೀವು ಧನ ಸಹಾಯ ಮಾಡಿದ ಮೇಲೆ ನಿಮ್ಮ ವಿಳಾಸ ಮತ್ತು PAN number ಕೆಳಗಿರುವ ಸಂಖ್ಯೆಗೆ WhatsApp ಮಾಡುವುದು.

**(Only for Indian Citizens)**

**Bank Account Details**

| | | |
|---|---|---|
| Name | : | Sevasangama Development Society |
| Account No | : | 16040100022902 |
| IFSC Code | : | FDRL0001604 |
| Bank | : | Federal Bank |
| Branch | : | Super Market Kalaburagi |

**Fr. Victor Anil Vas**
Director, Seva Sangama & ORBIT


Address

Seva Sangama Development Society, Near Kendriya Vidyalaya, Kotnoor D, Kalaburagi, Karnataka-585102
Contact: 8660968063 / 9743112739 - Email: sevasangama2006@gmail.com / Website: www.sevasangama.in